19ನೇ ಶತಮಾನದ ಕೊನೆಯ ಹೊತ್ತಿಗೆ ತುಳು ನಾಡಿನಲ್ಲಿ ಈ ಲಿಪಿ ಬಳಕೆಯಿಂದ ಬಿದ್ದು ಹೋಯಿಯತು. ಇದಕ್ಕೆ ಮುಖ್ಯ ಕಾರಣ ಅದು ಮುದ್ರಣಕ್ಕೆ ಬಳಕೆಯಾಗದಿರುವುದು. ಭಾರತಕ್ಕೆ ಮುದ್ರಣ ಯಂತ್ರ ಬಂದದ್ದು ಕ್ರೈಸ್ತ ಮಿಶನರಿಗಳ ಮೂಲಕ. ಕನ್ನಡಕ್ಕೂ ಮಿಶನರಿಗಳೇ ಮುದ್ರಣ ಯಂತ್ರವನ್ನು ಪರಿಚಯಿಸಿದರು ಮತ್ತು ಕನ್ನಡ ಲಿಪಿಯ ಪರಿಷ್ಕಾರಕ್ಕೆ ಕಾರಣರಾದರು. ಕನ್ನಡ ಲಿಪಿಯಲ್ಲಿ ಮೊದಲಿಗೆ ಮುದ್ರಣವಾದ ಕೃತಿಗಳು ಎರಡು, ಮುದ್ರಣಗೊಂಡದ್ದು ಬಂಗಾಲದ ಶ್ರೀರಾಮಪುರ ಪ್ರೆಸ್ಸಿನಲ್ಲಿ. ಅವುಗಳಲ್ಲಿ ಒಂದು ವಿಲಿಯಂ ಕೇರಿಯ 1817ರಲ್ಲಿ ಮುದ್ರಣವಾದ 'ಎ ಗ್ರಾಮರ್ ಓಫ್ ಕರ್ಣಾಟ ಲ್ಯಾಂಗ್ವೇಜ್', ಇನ್ನೊಂದು 1823ರಲ್ಲಿ ಮುದ್ರಣವಾದ ಬೈಬಲಿನ ಕನ್ನಡಾನುವಾದ. ಅಂದರೆ 1817ರ ಹೊತ್ತಿಗೆ ಕನ್ನಡ ಲಿಪಿಯಲ್ಲಿ ಅಚ್ಚಿನ ಮೊಳೆಗಳು ಸಿದ್ಧವಾದುವು, ಮದರಾಸು ಬಳ್ಳಾರಿಗಳಿಗೂ ಬಂದುವು. ಆದರೆ ಕನ್ನಡ ಮುದ್ರಣದಲ್ಲಿ ಮೈಲುಗಲ್ಲಾದದ್ದು ಮಂಗಳೂರಿನ ಬಾಸೆಲ್ ಮಿಶನ್ನಿನಕೊಡುಗೆ.[12] 1841ರ ಫೆಬ್ರವರಿಯಲ್ಲಿ ಜಾನ್ ವೈಗೆಲ್ ಮಂಗಳೂರಿಗೆ ಮೊತ್ತ ಮೊದಲು ಕಲ್ಲಚ್ಚಿನ ಮುದ್ರಣ ಯಂತ್ರವನ್ನು ತಂದನು. 'ಈ ಶಿಲಾ ಯಂತ್ರದಲ್ಲಿ ಮೊದಲು ಮುದ್ರಣಗೊಂಡ ಕೃತಿ ಸತ್ಯವೇದದ ಒಂದು ಭಾಗವಾಗಿರುವ 'ಮತ್ತಾಯನು ಬರೆದ ಸುವಾರ್ತೆ. ಇದು ಭಾರತಕ್ಕೆ ಮೊದಲು ಬಂದ ಮಿಶನರಿಗಳಲ್ಲೊಬ್ಬರಾದ ಸಿ.ಎಲ್. ಗ್ರೇನರ್ ಎಂಬವರ ಭಾಷಾಂತರವಾಗಿದೆ.'[13] 1852ರಲ್ಲಿ

ಇಲ್ಲಿ ಬಿಡಿ ಮೊಳೆಗಳಿಂದ ಮುದ್ರಿಸುವ ಲೆಟರ್ ಪ್ರೆಸ್ ಆರಂಭವಾಯಿತು. ಇದನ್ನು ತಂದವನು ಚಾರ್ಲ್ಸ್ ಜಾರ್ಜ್ ಆಂಡ್ರೂ ಪ್ಲೆಬ್ಸ್. ಇಲ್ಲಿಂದ ಕನ್ನಡ ಲಿಪಿ, ತುಳು ಭಾಷೆಯಲ್ಲಿ ನೂರಾರು ಗ್ರಂಥಗಳು ಪ್ರಕಟವಾದುವು. ಕನ್ನಡ ಲಿಪಿ ಸುಧಾರಣೆಯ ಕಾರ್ಯಗಳೂ ನಡೆದುವು. ಲಿಪಿ ಸುಧಾರಣೆಗೆ ಸಂಬಂಧಿಸಿದಂತೆ ಆಕ್ಷೇಪಗಳೂ ಬಂದುವು. 'ಇವಕ್ಕೆ ಉತ್ತರವಾಗಿ ಮೊಗ್ಲಿಂಗನು–ಒಂದು ಲಿಪಿಯ ಹಸ್ತಲಿಖಿತ ರೂಪ ಹಾಗೂ ಮುದ್ರಿತ ರೂಪ ಇವೆರಡೂ ತದ್ವತ್ ಇರಬೇಕೆಂಬ ತತ್ವವು ಗ್ರಾಹ್ಯವಲ್ಲವೆಂದು ಪ್ರತಿಪಾದಿಸಿ, ಯುರೋಪದಲ್ಲಿ ಮೊಳೆಗಳ ಮುದ್ರಣವು ಮೊದಲಾದಾಗ ಅಲ್ಲಿಯ ಅಕ್ಷರ ಶಿಲ್ಪಿಗಳು ಹಸ್ತಪ್ರತಿಗಳಲ್ಲಿದ್ದ ಸಂಕ್ಷೇಪದ ಹಾಗೂ ಸಾಂಕೇತಿಕ ಅಕ್ಷರಗಳನ್ನು ತ್ಯಜಿಸಿದರು; ಅದರ ಪರಿಣಾಮವಾಗಿ ಅಲ್ಲಿಯ ಮುದ್ರಿತ ಕೃತಿಗಳ ಚೆಲ್ವಿಕೆ ಹೆಚ್ಚಿದುದು ಮಾತ್ರವಲ್ಲ, ಅವು ಸುವೇದ್ಯವಾದುವು –ಎಂಬ ಸಮರ್ಥನೆಯನ್ನು ನೀಡಿದ್ದಾನೆ.'[14] ಬಾಸೆಲ್ ಮಿಶನ್ನಿನ ಈ ಪ್ರೆಸ್ಸಿನಲ್ಲಿ ಕನ್ನಡ, ತಮಿಳು, ಮಲೆಯಾಳ, ದೇವನಾಗರಿ, ರೋಮನ್ ಮತ್ತು ಜರ್ಮನ್ ಲಿಪಿಗಳ ಮೊಳೆಗಳಿದ್ದುವು. ಆದರೆ ತುಳು ಬಲ್ಲವರೆಲ್ಲ ಕನ್ನಡ ಬಲ್ಲವರೂ ಆಗಿರುತ್ತಾರೆ ಮತ್ತು ಓದು ಬರಹ ಬಲ್ಲವರು ಕನ್ನಡ ಮಾಧ್ಯಮದಲ್ಲೇ ಓದಿರುತ್ತಾರೆ ಎನ್ನುವ ಕಾರಣಕ್ಕೆ ಮಿಶನರಿಗಳು ತುಳುವಿಗಾಗಿ ಪ್ರತ್ಯೇಕ ಅಚ್ಚಿನ ಮೊಳೆಗಳನ್ನು ತಯಾರಿಸುವ ಗೋಜಿಗೆ ಹೋಗಲಿಲ್ಲ. ಜತೆಗೆ ಕನ್ನಡ ಲಿಪಿಯಲ್ಲಿ ತುಳು ಭಾಷೆಯನ್ನು ಮುದ್ರಿಸುವುದರಿಂದ ಯಾವ ತೊಡಕೂ ಉಂಟಾಗುವುದಿಲ್ಲ ಮತ್ತು ಯಾವ ಆಕ್ಷೇಪಣೆಯೂ ಎದುರಾಗಲಿಲ್ಲ. ಮುದ್ರಣ ಯಂತ್ರ ಬಂದಾಗ ಅಚ್ಚಿನ ಮೊಳೆ ತಯಾರಿಸುವವರು ಸ್ವಾತಂತ್ರ್ಯ ತೋರಿ ಲಿಪಿಯಲ್ಲಿ ಸ ಪುಟ್ಟ ವ್ಯತ್ಯಾಸಗಳನ್ನು ತರುವುದೂ ಓದುಗರಿಗೆ ಅಭ್ಯಾಸವಾಗತೊಡಗಿತು. ಅಚ್ಚಿನ ಮೊಳೆ ತಯಾರಿಸದ ಲಿಪಿಗಳು ಮಾತ್ರ ಬರವಣಿಗೆಯ ರೂಪದಲ್ಲೇ ಉಳಿದುವು. ಇದು ಅನಿವಾರ್ಯತೆಯೇ ಹೊರತು ದಾಸ್ಯದ ಸಂಕೇತವಲ್ಲ. ಈಗಲೂ ತಿಗಳಾರಿ ಅಥವಾ ತುಳುಲಿಪಿಯಲ್ಲೇ ಮಂತ್ರ ಇತ್ಯಾದಿಗಳನ್ನು ಬರೆದಿಡುವ ಹಿರಿಯರು ತುಳು ನಾಡಿನಲ್ಲಿದ್ದಾರೆ.

*****

ಭಾಷೆ ಮತ್ತು ಲಿಪಿಗೆ ನೇರವಾದ ಯಾವುದೇ ಸಂಬಂಧ ಇಲ್ಲ. ಈ ಮಾತು ತುಳುಲಿಪಿಯ ಮಟ್ಟಿಗೂ ನಿಜ. ಇದು ಮೂಲತಃ ದಕ್ಷಿಣ ಬ್ರಾಹ್ಮಿಯಿಂದ ಹುಟ್ಟಿಕೊಂಡ ಗ್ರಂಥಲಿಪಿಯ ಒಂದು ಪ್ರಭೇದ. ಮುಖ್ಯವಾಗಿ ಇದು ಚಲಾವಣೆಯಲ್ಲಿದ್ದದ್ದು ಇಂದಿನ ತುಳುನಾಡಿನ ವ್ಯಾಪ್ತಿಯಲ್ಲಿ; ಹೆಚ್ಚು ಕಡಿಮೆ ಕುಂದಾಪುರದಿಂದ ದಕ್ಷಿಣಕ್ಕೆ, ಪಶ್ಚಿಮ ಘಟ್ಟಗಳಿಂದ ಪಶ್ಚಿಮಕ್ಕೆ. ತುಳುನಾಡಿನ ವ್ಯಾಪ್ತಿಯಲ್ಲಿ ಹೆಚ್ಚಾಗಿ ಪ್ರಚಲಿತದಲ್ಲಿ ಇದ್ದುದರಿಂದ ಆಗಿರಬೇಕು, ಇದನ್ನು ತುಳು ಲಿಪಿ ಎಂದು ಗುರುತಿಸಲಾಗಿದೆ. ತುಳು ಲಿಪಿ ಎಂಬ ಪದಬಳಕೆಯ ಇತಿಹಾಸ ಹೆಚ್ಚು ಹಳೆಯದಲ್ಲ, ಮೂಲದಲ್ಲಿ ತಿಗಳಾರಿ ಎಂಬ ಹೆಸರೇ ಇತ್ತು. 1874ರಲ್ಲಿ ಪ್ರಕಟವಾದ ಎ.ಸಿ. ಬರ್ನೆಲ್‌ನ ಕೃತಿ ಈ ಲಿಪಿ ಸಂಪ್ರದಾಯವನ್ನು ತುಳುಲಿಪಿ ಎಂದು ಮೊದಲಬಾರಿಗೆ ಉಲ್ಲೇಖಿಸುತ್ತದೆ. ಮಂಗಳೂರು, ಕಾಸರಗೋಡು ಕಡೆ ತಿಗಳಾರಿ ಎಂಬ ಪದದ ಬಳಕೆ ಇಲ್ಲ, ತುಳು ಲಿಪಿ ಎಂದೇ ಕರೆಯುವುದು ರೂಢಿ. ಪ್ರದಕ್ಷಿಣಾಕಾರದ ಚಲನೆ, ವೃತ್ತ ಮತ್ತು ಕೋನಾಕಾರದ, ಹೆಚ್ಚು ಕಡಿಮೆ ಸಮಪ್ರಮಾಣದ ಮಿಶ್ರಣ, ತಲೆಕಟ್ಟು ಇಲ್ಲದಿರುವಿಕೆ, ಒಂದು, ಒಂದೂವರೆ ಮತ್ತು ಎರಡು ಪಟ್ಟು ಗಾತ್ರದ ಮಿತಿಯುಳ್ಳ ಸಂಕೇತಾಕೃತಿಗಳು, ಕನ್ನಡದಂತೆಯೇ ಲಿಪಿಸಂಜ್ಞೆಯ

ಭಾಗಗಳನ್ನೇ ಇಟ್ಟುಕೊಂಡು ರೂಪಿಸಿದ ಅಂಕೆಗಳು, ಎಕಾರ ಒಕಾರಗಳಲ್ಲಿ ಹ್ರಸ್ವ ದೀರ್ಘರಾಹಿತ್ಯ, ಇಡೀ ಅಕ್ಷರ ಸಂಜ್ಞೆಯನ್ನೇ ವ್ಯಂಜನ ದ್ವಿತ್ವವಾಗಿ ರೂಪಿಸುವ ಕ್ರಮ –ಹೀಗೆ ಈ ಲಿಪಿ ಸಂಪ್ರದಾಯಕ್ಕೆ ಅದರದ್ದೇ ಆದ ಲಕ್ಷಣಗಳಿವೆ. ತಲೆಕಟ್ಟು ಇಲ್ಲದಿರುವುದು ಮತ್ತು ಪ್ರದಕ್ಷಿಣಾಕೃತಿಯ ಚಲನೆಗಳಿಂದಾಗಿ ಈ ಲಿಪಿ ತಾಳೆಯೋಲೆಯ ಮೇಲಿನ ಬರವಣಿಗೆಗೆ ಚೆನ್ನಾಗಿ ಒಗ್ಗುತ್ತದೆ. ಮುದ್ರಣ ಮಾಧ್ಯಮಗಳು ಬರುವುದಕ್ಕಿಂತ ಹಿಂದಿನ ಲೇಖನ ಮಾಧ್ಯಮಗಳ, ಮುಖ್ಯವಾಗಿ ತಾಳೆಯೋಲೆಯ ಮೇಲಿನ ಬರವಣಿಗೆಯ ಅನಿವಾರ್ಯತೆಕ್ಕನುಗುಣವಾಗಿ ಈ ಲಿಪಿ ಬಳಕೆಗೆ ಬಂತು. ದೇವನಾಗರಿಯಂತೆ ಉದ್ದದ ತಲೆಕಟ್ಟಿರುವ ಲಿಪಿರೂಪಗಳನ್ನು ತಾಳೆಯೋಲೆಯ ಮೇಲೆ ಕೊರೆಯುವಾಗ ಓಲೆ ಉದ್ದಕ್ಕೆ ಸಿಗಿದು ಹೋಗಬಹುದಾದ ಅಪಾಯವಿದೆ. ಅದನ್ನು ತಪ್ಪಿಸಲು ತಲೆಕಟ್ಟುಗಳಿಲ್ಲದ ಈ ಲಿಪಿರೂಪಗಳಿಂದ ಸಾಧ್ಯವಾಯಿತು. ಕನ್ನಡ–ತೆಲುಗು ಲಿಪಿ ಸಂಪ್ರದಾಯ, ಸ್ವತಃ ತಲೆಕಟ್ಟುಳ್ಳ ಲಿಪಿಸಂಪ್ರದಾಯವಾಗಿದ್ದರೂ, ತಲೆಕಟ್ಟನ್ನು ಮುರಿದುಕೊಂಡು ತಾಳೆಯೋಲೆಗೆ ಹೊಂದಿಕೊಂಡದ್ದನ್ನು ಇಲ್ಲಿ ಗಮನಿಸಬೇಕು.

ಈಗಾಗಲೇ ದೊರೆತ ಶಾಸನಗಳನ್ನು ಗಮನಿಸಿದರೆ, ಅನಂತಪುರ ಶಾಸನವನ್ನು ಬಿಟ್ಟು ಉಳಿದ ಶಾಸನಗಳಲ್ಲಿ ಲಿಪಿರೂಪಗಳ ಗಾತ್ರ ನಿರ್ದಿಷ್ಟವಾಗಿಲ್ಲ, ಅಂದರೆ, ಒಂದೊಂದು ಅಕ್ಷರ ಒಂದೊಂದು ಗಾತ್ರದಲ್ಲಿ, ಭಿನ್ನ ಆಕಾರಗಳಲ್ಲಿರುವುದು ಕಂಡುಬರುತ್ತದೆ. ಅಕ್ಷರಗಳನ್ನು ಸಮತೂಕದ ಗಾತ್ರಕ್ಕೆ ಹೊಂದಿಸಿ ಬರೆಯುವ ಶಿಸ್ತುಬದ್ಧವಾದ ಕಂಡರಿಸುವಿಕೆ ಇಲ್ಲ. ಆದರೆ ದೊರೆತ ಏಕೈಕ ತಾಮ್ರಶಾಸನದ ಬರವಣಿಗೆ ಸುಂದರವಾಗಿದೆ. ಈ ಲಿಪಿಯ ಬಳಕೆ ತುಳು ನಾಡಿನಲ್ಲಿ ವ್ಯಾಪಕವಾಗಿತ್ತು ಎನ್ನುವುದಕ್ಕೆ ಇಲ್ಲಿ ಸಿಗುವ ಅಸಂಖ್ಯ ತಾಳೆಯೋಲೆಗಳು ಸಾಕ್ಷಿಹೇಳುತ್ತವೆ. ವೇದ, ವೇದಾಂತ, ಜ್ಯೋತಿಷ, ವೈದ್ಯ, ವೈದಿಕ ವಿಧಿ ವಿಧಾನಗಳು, ಸಂಸ್ಕೃತ ಸಾಹಿತ್ಯ, ವ್ಯಾಕರಣ, ತಂತ್ರಶಾಸ್ತ್ರ ಇತ್ಯಾದಿಗಳಿಂದ ತೊಡಗಿ ಮನೆಯ ಲೆಕ್ಕಪತ್ರಗಳ ವರೆಗಿನ ವಿವಿಧ ವಿಷಯಗಳನ್ನು ಬರೆದಿಡಲು ಈ ಲಿಪಿಯನ್ನು ಬಳಸುತ್ತಿದ್ದರು. ಋಗ್ವೇದ ಸಂಹಿತೆ, ಭಾಗವತ, ರಾಮಾಯಣ, ಬೋಧಾಯನೀಯ ಮುಂತಾದ ಬೃಹತ್ ಗ್ರಂಥಗಳು ಈ ಲಿಪಿಯಲ್ಲಿ ದೊರೆಯುತ್ತವೆ. ಪ್ರಾಚೀನ ತುಳು ಕಾವ್ಯಗಳೂ ಇದೇ ಲಿಪಿಯಲ್ಲಿವೆ. ಅಂದರೆ ಈ ಲಿಪಿ ಬಳಕೆಯಾಗುತ್ತಿದ್ದುದು ಮುಖ್ಯವಾಗಿ ತುಳುನಾಡಿನಲ್ಲಿ, ಮತ್ತು ಸಂಸ್ಕೃತದ ಬರವಣಿಗೆಗೆ ಎಂಬುದರಲ್ಲಿ ಎರಡು ಮಾತಿಲ್ಲ.

ಬ್ರಿಟಿಷರು, ನೇರವಾಗಿ ಅಥವಾ ಪರೋಕ್ಷವಾಗಿ 19ನೇ ಶತಮಾನದ ಉತ್ತರಾರ್ಧದಲ್ಲಿ ತಾಳೆಯೋಲೆ ಗ್ರಂಥಗಳ ಸಂಗ್ರಹದ ಕೆಲಸವನ್ನು ಆರಂಭಿಸಿದರು. ಕುದುರೆಯ ಮೇಲೆ ಊರೂರು ತಿರುಗಿ, ರಾಶಿಗಟ್ಟಲೆ ಗ್ರಂಥಗಳನ್ನು ಕಲೆಹಾಕಿ, ಸಂಗ್ರಹಾಲಯಗಳನ್ನು ಸ್ಥಾಪಿಸಿ, ಕರ್ನಲ್ ಮೆಕೆಂಝಿ, ಬಿ. ಎಲ್. ರೈಸ್ ಮುಂತಾದವರು ಮಾಡಿದ ಕೆಲಸ ಮುಂದೆ ಭಾರತೀಯ ವಿದ್ವಾಂಸರ ಮೂಲಕ ವ್ಯಾಪಕವಾಗಿ ಬೆಳೆಯಿತು. ದಕ್ಷಿಣ ಭಾರತದ ಮದರಾಸು, ಮೈಸೂರು, ತಿರುವನಂತಪುರ ಮುಂತಾಗಿ ಹಲವೆಡೆ ಹಸ್ತಪ್ರತಿ ಸಂಗ್ರಹಾಲಯಗಳ ಸ್ಥಾಪನೆಯಾಯಿತು. ಸಂಗ್ರಹದ ಹಿಂದೆಯೇ ಸಂಪಾದನೆಯ ಕಾರ್ಯವನ್ನೂ ಕೈಗೊಳ್ಳಲಾಯಿತು. ತುಳುವನ್ನು ಬಿಟ್ಟು ಉಳಿದ ಭಾಷೆಗಳಿಗೆ ಸಂಬಂಧಿಸಿದಂತೆ ಈ ಕೆಲಸ ಈಗ ಬಹುತೇಕ ಪೂರ್ಣಗೊಂಡಿದೆ.

ಮೆಕೆಂರಿಝಿ ಸಂಗ್ರಹಿಸಿದ ಎಷ್ಟೋ ಸಾವಿರ ಗ್ರಂಥಗಳನ್ನು ಇಂಗ್ಲಂಡಿಗೆ ಸಾಗಿಸಿದ್ದು ಭಾರತದ ಮಟ್ಟಿಗೆ ಒಂದು ದೊಡ್ಡ ದುರಂತ. ಗ್ರಂಥಗಳನ್ನು ವಿದೇಶಕ್ಕೆ ಸಾಗಿಸುವ ಪ್ರಯತ್ನ ಸ್ವಾತಂತ್ರ್ಯ ಸಿಕ್ಕಿದ ಮೇಲೂ ಮುಂದುವರಿದಿದೆ. ಹೀಗೆ ಸಾಗಿಸಿದ್ದರಲ್ಲಿ ಹೆಚ್ಚಿನವು ವೈದ್ಯಗ್ರಂಥಗಳು ಎನ್ನುವುದು ಗಮನಾರ್ಹ.

ತುಳುನಾಡಿನ ತಾಳೆಯೋಲೆಗಳ ಬಗ್ಗೆ ಹೇಳುವ ಮಾತು ಭಾರತದ ಇತರ ಪ್ರದೇಶಗಳಿಗೂ ಅನ್ವಯವಾಗುತ್ತದೆ. ತುಳುನಾಡಿನಲ್ಲಿ ಮೇಲಿನಿಂದ ಮೇಲೆ ಸಂಗ್ರಹ ಕಾರ್ಯ ನಡೆಯುತ್ತಲೇ ಇದ್ದರೂ ಇನ್ನೂ ಸಾವಿರಗಟ್ಟಲೆ ಗ್ರಂಥಗಳು ಮನೆಗಳ ಅಟ್ಟದಲ್ಲಿ ಹಾಳುಬಿದ್ದಿರುವುದು ಸತ್ಯ. ಮೊದಮೊದಲು ಸಂಗ್ರಹವಾದ ಗ್ರಂಥಗಳು ಮೈಸೂರಿಗೋ ಮದರಾಸಿಗೋ ಹೋದುವು. ಅಲ್ಲಿಂದ ವಿದೇಶಕ್ಕೂ ದಾಟಿದುವು. ಅನಂತರ ಸಂಗ್ರಹವಾದುವು ಒಂದಷ್ಟು ಮೈಸೂರು, ಮದರಾಸುಗಳಿಗೂ, ಒಂದಷ್ಟು ಕಲ್ಲಿಕೋಟೆ, ಧಾರವಾಡ, ಮಂಗಳೂರು ಮುಂತಾದ ವಿಶ್ವವಿದ್ಯಾಲಯಗಳ ಸಂಗ್ರಹಾಲಯಗಳಿಗೂ ಹಂಚಿ ಹೋದುವು. ಅನಂತರ ಖಾಸಗೀ ಸಂಗ್ರಹಾಲಯಗಳು ಈ ಕೆಲಸಕ್ಕೆ ಕೈಹಾಕಿದುವು. ಧರ್ಮಸ್ಥಳದ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಉಡುಪಿಯ ಪುತ್ತಿಗೆ ವಿದ್ಯಾ ಪೀಠ, ಹೊಸನಗರದ ರಾಮಚಂದ್ರಾಪುರ ಮಠ ಮುಂತಾಗಿ ಹಲವೆಡೆ ತಾಳೆಯೋಲೆ, ಕಡತ, ಕಾಗದದ ಹಸ್ತಪ್ರತಿ –ಇತ್ಯಾದಿಗಳ ಬೃಹತ್ ಸಂಗ್ರಹಗಳಿವೆ. ಎಲ್ಲ ಹಸ್ತಪ್ರತಿ ಸಂಗ್ರಹಾಲಯಗಳೂ ನಿರಂತರವಾಗಿ ಹಸ್ತಪ್ರತಿಗಳನ್ನು ಸಂಗ್ರಹಿಸುತ್ತಿವೆ ಮತ್ತು ವೈಜ್ಞಾನಿಕವಾಗಿ ಸ್ವಚ್ಛಗೊಳಿಸಿ ಕಾಪಾಡುತ್ತಿವೆ. ಆದರೆ ಮನೆಗಳಲ್ಲಿರುವ ಹಸ್ತಪ್ರತಿಗಳು ತೀರಾ ನಿರ್ಲಕ್ಷಿತ ಸ್ಥಿತಿಯಲ್ಲಿ ದಿನೇ ದಿನೇ ಶಿಥಿಲಗೊಳ್ಳುತ್ತ ಕೀಟಗಳಿಗೆ ಆಹಾರವಾಗುತ್ತಿವೆ.

ತಾಳೆಯೋಲೆಗಳ ಕಟ್ಟನ್ನು ಬಿಗುವಾಗಿ ಕಟ್ಟಿರಬೇಕು. ಬಿಸಿ ಹಾಗೂ ಆರ್ದ್ರತೆಯಿಂದ ದೂರವಿಡಬೇಕು. ಜಿರಳೆ, ಸಿಲ್ವರ್ ಫಿಶ್, ಗೆದ್ದಲು ಹಾಗೂ ಇಲಿಗಳಿಗೆ ಸಿಗದಂತೆ ಎಚ್ಚರ ವಹಿಸಬೇಕು. ಆದರೆ ಯಾವ ಮನೆಯಲ್ಲೂ ಇದನ್ನು ಪಾಲಿಸುವುದಿಲ್ಲ.

ಪ್ರತಿಯೊಬ್ಬರೂ ತಾಳೆಯೋಲೆಯನ್ನು ಅಮೂಲ್ಯ ಸಂಪತ್ತು ಎಂದು ಭಾವಿಸುತ್ತಾರೆ, ಒಳಗೆ ಏನಿದೆ ಎಂದು ಗೊತ್ತಿಲ್ಲದಿದ್ದರೂ ಏನೋ ಇದೆ ಎಂದು ನಂಬುತ್ತಾರೆ. ಹೆಚ್ಚಿನ ಮನೆಗಳಲ್ಲೂ ಸಾಮಾನ್ಯವಾಗಿ ಕಂಡು ಬರುವುದು ದೇವೀ ಮಹಾತ್ಮೆಯ ಓಲೆ. ಇದನ್ನು ದೇವರ ಕೋಣೆಯಲ್ಲಿ ಪ್ರತ್ಯೇಕವಾಗಿರಿಸಿ ಪೂಜಿಸುವ ಪದ್ಧತಿಯಿದೆ. ಪೂಜೆಯ ಸಂದರ್ಭದಲ್ಲಿ ನೀರು ಹಾಕಿ ಗಂಧ ಮೆತ್ತುವುದರಿಂದಾಗಿ ಹೆಚ್ಚಿನ ಎಲ್ಲ ಮನೆಗಳ ದೇವೀಮಹಾತ್ಮೆಯ ಓಲೆಗಳೂ ಅತ್ಯಂತ ಜೀರ್ಣಾವಸ್ಥೆಯಲ್ಲಿರುತ್ತವೆ.

ಇತರ ತಾಳೆಯೋಲೆ ಗ್ರಂಥಗಳನ್ನು ಸಾಮಾನ್ಯವಾಗಿ ಮರದ ಪೆಟ್ಟಿಗೆಯಲ್ಲಿ ಅಥವಾ ಬೆತ್ತದ ಬುಟ್ಟಿಯಲ್ಲಿ ಹಾಕಿ ಅಟ್ಟದ ಮೇಲೆ ಇಡುತ್ತಾರೆ. ಇವುಗಳು ಬಿಗುವಾದ ಕಟ್ಟ ಸಡಿಲವಾಗಿ, ಧೂಳು ತುಂಬಿ, ಬೂಸುರು ಹಿಡಿದು, ಕೀಟಗಳಿಗೆ ಆಹಾರವಾಗಿ ಜೀರ್ಣಾವಸ್ಥೆಗೆ ಇಳಿಯುತ್ತವೆ.

ತುಳುನಾಡಿನ ತುಳು ಲಿಪಿಯ ತಾಳೆಯೋಲೆಗಳಲ್ಲಿರುವುದು ಬಹುಪಾಲು ವೈದಿಕ ಮಂತ್ರಗಳು. ಇವುಗಳ ಪೈಕಿ ಸಮಗ್ರ ಗೃಹ್ಯಸೂತ್ರದಂತಹ ಬೃಹತ್ ಕೃತಿಗಳೂ ಇವೆ, ಒಂದೊಂದು ಕ್ರಿಯೆಗೆ ಬೇಕಾದ ಮಂತ್ರಗಳನ್ನು ಬೇರೆಬೇರೆಯಾಗಿ ಬರೆದಿಟ್ಟ ಓಲೆಗಳೂ ಇವೆ. ಒಂದೇ

ಕಟ್ಟದಲ್ಲಿ ಪುಣ್ಯಾಹ, ಉಪನಯನ, ವಿವಾಹ ಮುಂತಾಗಿ ಪೌರೋಹಿತ್ಯದ ಸಾಮಾನ್ಯ ಅಗತ್ಯಗಳಿಗೆ ಬೇಕಾದ ಮಂತ್ರಗಳನ್ನು ಸಂಗ್ರಹಿಸಿ, ಎಡಬದಿಯ ಮಾರ್ಜಿನಿನಲ್ಲಿ ಯಾವ ಮಂತ್ರ ಎಂದು ಸೂಚಿಸಿ ಬರೆದಿಟ್ಟ, ಪುರೋಹಿತರ ದಿನಬಳಕೆಯ ಗ್ರಂಥಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಇಂತಹ ಗ್ರಂಥಗಳು ಗಾತ್ರದಲ್ಲಿ ಚಿಕ್ಕದಾಗಿದ್ದು, ಕೊಂಡೊಯ್ಯಲು ಅನುಕೂಲವಾಗುವಂತಿವೆ. ಇದೇ ಮಾದರಿಯಲ್ಲಿ ನಿತ್ಯ ಪಠನ ಸ್ತೋತ್ರಗಳನ್ನೂ ಬರೆದಿಡಲಾಗುತ್ತದೆ. ಸಸ್ವರ ವೇದಮಂತ್ರಗಳಿರುವ ತಾಳೆಯೋಲೆಗಳೂ ದೊರೆಯುತ್ತವೆ.

ಸಂಸ್ಕೃತ ಸಾಹಿತ್ಯ ಕೃತಿಗಳು, ತಾಂತ್ರಿಕ ಗ್ರಂಥಗಳು, ಜ್ಯೋತಿಷ ಹಾಗೂ ವೈದ್ಯ ಗ್ರಂಥಗಳು ಸಂಖ್ಯೆಯ ದೃಷ್ಟಿಯಿಂದ ಎರಡನೆಯ ಸ್ಥಾನದಲ್ಲಿವೆ. ಕಾಳಿದಾಸ, ಮಾಘ, ಭಾರವಿ ಮುಂತಾದ ಕವಿಗಳ ಕೃತಿಗಳ ಕೃತಿಗಳ ಓಲೆಗಳು ಸಂಸ್ಕೃತ ವಿದ್ವಾಂಸ ಪರಂರೆಯ ಮನೆತನಗಳಲ್ಲಿ ಈಗಲೂ ಇವೆ. ವೈದ್ಯ ಗ್ರಂಥಗಳ ಪೈಕಿ ಶೇಕಡಾ 50ರಷ್ಟು ತುಳು ಲಿಪಿಯಲ್ಲೂ ಉಳಿದವು ಮಲಯಾಳಂ ಲಿಪಿಯಲ್ಲೂ ಇವೆ. ತುಳುನಾಡಿನ ಉತ್ತರಕ್ಕೆ ಹೋದಂತೆ ಮಲಯಾಳ ಲಿಪಿಯ ಗ್ರಂಥಗಳ ಸಂಖ್ಯೆ ಗಣನೀಯವಾಗಿ ಇಳಿಯುವುದನ್ನು ಗಮನಿಸಬಹುದು.

ತುಳುನಾಡಿನಲ್ಲಿ ಸ ಪ್ರಮಾಣದಲ್ಲಿ ಕನ್ನಡ ಲಿಪಿಯ ವೈದ್ಯ ಗ್ರಂಥಗಳೂ ಸಿಗುವುದುಂಟು. ಸಂಸ್ಕೃತ ಭಾಷೆ, ಸಂಸ್ಕೃತ ಲಿಪಿಯನ್ನು ಹೊರತುಪಡಿಸಿದರೆ ಸಾಮಾನ್ಯವಾಗಿ ಆಯಾ ಲಿಪಿಯ ಗ್ರಂಥಗಳು ಆಯಾ ಭಾಷೆಯಲ್ಲೇ ಇರುತ್ತವೆ. ಅಪವಾದಕ್ಕೆ ಕೆಲವು ತುಳು ಲಿಪಿ, ಕನ್ನಡ ಭಾಷೆಯಲ್ಲಿರುವುದೂ ಉಂಟು.

ವೈದ್ಯ ಗ್ರಂಥಗಳ ಪೈಕಿ ಮೂಲ ಗ್ರಂಥಗಳೂ ವ್ಯಾಖ್ಯಾನಗಳೂ ದೊರೆಯುತ್ತವೆ. ಜ್ಯೋತಿಷಕ್ಕೂ ಧಾರಾಳ ವ್ಯಾಖ್ಯಾನಗಳಿವೆ. ವೈದ್ಯದಲ್ಲಿ ನಾಟಿಯೂ ಇದೆ, ಆಯುರ್ವೇದವೂ ಇದೆ. ದಿನಬಳಕೆಗಾಗಿ ಔಷಧಿಯ ಕ್ರಮವನ್ನು ಒಂದರ ನಂತರ ಒಂದರಂತೆ ಬರೆದು ಎಡಬದಿಯಲ್ಲಿ ರೋಗವನ್ನು ಸೂಚಿಸಲಾಗುತ್ತದೆ. ಜ್ಯೋತಿಷ ಗ್ರಂಥಗಳಲ್ಲಿ ಹೆಚ್ಚಿನವೂ ಮಲಯಾಳ ಲಿಪಿಯಲ್ಲಿದ್ದು ಮಲಯಾಳ ವ್ಯಾಖ್ಯಾನವನ್ನು ಒಳಗೊಂಡಿರುತ್ತವೆ.

ವಿದ್ಯಾರ್ಥಿಗಳು ತಮ್ಮ ಓದಿನ ಅಗತ್ಯಕ್ಕಾಗಿ ತಯಾರಿಸಿದ ಸಂಸ್ಕೃತ ಸಾಹಿತ್ಯ ಕೃತಿಗಳು ಸಾಮಾನ್ಯವಾಗಿ ಟೀಕೆ, ಟಿಪ್ಪಣಿ, ಅರ್ಥವ್ಯಾಖ್ಯಾನಗಳನ್ನು ಒಳಗೊಂಡಿರುತ್ತವೆ.

ಸಂಸ್ಕೃತ ಸಾಹಿತ್ಯ ಕೃತಿಗಳ ಪೈಕಿ ಭಾಗವತದದ್ದೇ ಸಿಂಹಪಾಲು. ಮಲಯಾಳದಲ್ಲಿ ರಾಮಾಯಣದ ಹಸ್ತಪ್ರತಿಗಳು ಹೆಚ್ಚು. ಕನ್ನಡದಲ್ಲಿ ಕುಮಾರವ್ಯಾಸ ಭಾರತ, ತೊರವೆ ರಾಮಾಯಣ ಹಾಗೂ ವಾಸಿಷ್ಠ ರಾಮಾಯಣಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತವೆ. ತುಳು ಲಿಪಿ, ತುಳು ಭಾಷೆಯ ನಾಲ್ಕಾರು ಪ್ರಾಚೀನ ಮಹಾ ಕಾವ್ಯಗಳ ಜತೆಗೆ ವ್ಯಾಖ್ಯಾನ, ವಿಧಿ ಇತ್ಯಾದಿಗಳನ್ನೂ ತುಳು ಭಾಷೆಯಲ್ಲಿ ಬರೆದಿಡುತ್ತಿದ್ದರೆನ್ನುವುದಕ್ಕೆ ದಾಖಲೆಯಾಗಿ ಕೆಲವು ಓಲೆಗಳೂ ಸಿಕ್ಕಿವೆ.

ತುಳು ಲಿಪಿಯ ಗ್ರಂಥಗಳಲ್ಲಿ ಓಲೆಯ ಕ್ರಮ ಸಂಖ್ಯೆ ಮತ್ತು ಪದ್ಯ ಸಂಖ್ಯೆಯನ್ನು ಬರೆಯಲು ಕನ್ನಡ ಸಂಖ್ಯಾಲಿಪಿಯನ್ನೇ ಬಳಸುತ್ತಿದ್ದರು. ಬೆರಳೆಣಿಕೆಯ ಗ್ರಂಥಗಳಲ್ಲಿ ಮಾತ್ರವೇ ತುಳು ಸಂಖ್ಯಾಲಿಪಿ ಕಂಡುಬಂದಿದೆ. ಮಲಯಾಳದಲ್ಲಿ ಮಲಯಾಳ ಸಂಖ್ಯೆಗಳ ಬಳಕೆ ಇದೆ.

ಜಾತಕ, ಸರಕಾರಿ ದಾಖಲೆ, ಆರ್ಥಿಕ ಲೆಕ್ಕಾಚಾರ ಇತ್ಯಾದಿಗಳನ್ನು ಬರೆದಿಡುವುದಕ್ಕೂ ತಾಳೆಯೋಲೆಗಳನ್ನು ಬಳಸಲಾಗುತ್ತಿತ್ತು. ತಾಳೆಯೋಲೆಗಳಲ್ಲಿರುವ ನ್ಯಾಯಾಲಯದ ಆದೇಶಗಳೂ ಸರಕಾರದ ಸುತ್ತೋಲೆಗಳೂ ಸಾಮಾನ್ಯವಾಗಿ ಒತ್ತುಮುದ್ರೆಗಳನ್ನು ಒಳಗೊಂಡಿದ್ದು, ಹಳೆಯ ಪಟೇಲರ ಮನೆಗಳಲ್ಲಿ ದೊರೆಯುತ್ತವೆ. ತೀರ ಇತ್ತೀಚಿನವರೆಗೂ ಜಾತಕಗಳನ್ನು ತಾಳೆಯೋಲೆಗಳಲ್ಲಿ ಬರೆದಿಡುವ ಪದ್ಧತಿಯಿತ್ತು.

ಗಂಧದ, ಆನೆಯ ದಂತದ ಹಲಗೆಗಳಿಂದ ಆಧರಿಸಿ ಕಟ್ಟಿದ ತಾಳೆಯೋಲೆಗಳೂ, ರೇಖಾ ಚಿತ್ರ, ವರ್ಣ ಚಿತ್ರಗಳಿಂದ ಅಲಂಕರಿಸಿದ ತಾಳೆಯೋಲೆಗಳೂ ಈ ಪ್ರದೇಶದಲ್ಲಿ ದೊರೆತದ್ದುಂಟು. ನಾಲ್ಕಾರು ಇಂಚಿನಿಂದ ತೊಡಗಿ ನಾಲ್ಕಡಿ ಉದ್ದದವರೆಗಿನ ಓಲೆಗಳೂ ಇವೆ. ಸಾಕಷ್ಟು ಸಂಸ್ಕರಿಸಿದ ಓಲೆಗಳನ್ನೂ ತೀರಾ ಸಂಸ್ಕರಿಸದ ಓಲೆಗಳನ್ನೂ ಬರವಣಿಗೆಗಾಗಿ ಬಳಸಿದ್ದು ಕಂಡುಬರುತ್ತದೆ.

ಮುದ್ರಣ ಬಂದೊಡನೆ ತಾಳೆಯೋಲೆಗಳು ಎಷ್ಟು ಬೇಗ ಮೂಲೆಗುಂಪಾದುವು ಎನ್ನುವುದಕ್ಕೆ ಸಾಕಷ್ಟು ಮನೆಗಳಲ್ಲಿ ಸಿಗುವ, ಸಿದ್ಧಗೊಳಿಸಿ ಇಟ್ಟ ಬರೆಯದ ತಾಳೆಯೋಲೆಗಳೂ, ಬರೆದು ಮಸಿಹಾಕದೇ ಬದಿಗಿರಿಸಿದ ತಾಳೆಯೋಲೆಗಳೂ ಸಾಕ್ಷಿಯಾಗಿ ನಿಲ್ಲುತ್ತವೆ.

****

ಎಟುತ್ತು ಎಂದರೆ ಬರವಣಿಗೆ. ಆರ್ಯ ಎಟುತ್ತು ಎಂದರೆ ಆರ್ಯ ಲಿಪಿ. ಆರ್ಯ ಎಂಬ ಪದ ಶ್ರೇಷ್ಠ ಎಂಬ ಅರ್ಥ ಹೊಂದಿದ್ದು ಭಾಷಿಕವಾಗಿ ಸಂಸ್ಕೃತವನ್ನು ಸೂಚಿಸುತ್ತದೆ. ಮುದ್ರಣ ಪೂರ್ವ ಕಾಲಘಟ್ಟದಲ್ಲಿ ಅಂದಿನ ಅಗತ್ಯಗಳ ಪೂರೈಕೆಗಾಗಿ ತುಳುನಾಡಿನಾದ್ಯಂತ ವ್ಯಾಪಕ ಬಳಕೆಯಲ್ಲಿದ್ದ ಲಿಪಿ ಸಂಪ್ರದಾಯ ಸ ಪ್ರಮಾಣದಲ್ಲಿ ತುಳು ಭಾಷೆಯ ಬರವಣಿಗೆಗೆ ಬಳಕೆಯಾಯಿತು ಎನ್ನುವುದು ಈ ಪ್ರದೇಶದಲ್ಲಿ ದೊರೆಯುವ ತಾಳೆಯೋಲೆಗಳ ದತ್ತಾಂಶದಿಂದ ಸಾಬೀತಾಗುತ್ತದೆ. ಹೀಗಾಗಿ, ಈ ಲಿಪಿಯನ್ನು ತುಳುಲಿಪಿ ಎಂದು ಗುರುತಿಸಿರುವುದು ತುಳು ಭಾಷೆಯ ಲಿಪಿ ಎಂಬ ಕಾರಣಕ್ಕಲ್ಲ, ತುಳುನಾಡಿನಲ್ಲಿ ವ್ಯಾಪಕ ಬಳಕೆಯಲ್ಲಿದ್ದ ಲಿಪಿ ಎಂಬ ಕಾರಣಕ್ಕೆ ಎನ್ನುವ ತೀರ್ಮಾನಕ್ಕೆ ಬಂದು ತಲುಪುವುದು ಅನಿವಾರ್ಯವಾಗಿಬಿಡುತ್ತದೆ.

ತುಳುವಿನಲ್ಲಿ ಅರ್ಧ ಸ್ವರ

ತುಳುವಿನಲ್ಲಿ ಬಳಕೆಯಲ್ಲಿರುವ ವಿಶಿಷ್ಟವಾದ ವರ್ಣ '៑' ಕಾರಕ್ಕೆ ಕನ್ನಡದಲ್ಲಿ 'ಅ್' ಚಿಹ್ನೆಯನ್ನು ಈಗಾಗಲೇ ಬಳಸಲಾಗುತ್ತಿದೆ. ತುಳು ನಿಘಂಟಿನಲ್ಲೂ ಇದನ್ನೇ ಬಳಸಲಾಗಿದೆ. ಈ ವರ್ಣ ಪದದ ಆರಂಭದಲ್ಲಿ ಬರುವಾಗ ಅಕಾರಕ್ಕೆ ಅರ್ಧಾಕ್ಷರದ ಚಿಹ್ನೆಯನ್ನು ಜೋಡಿಸಿ ಪ್ರಾಚೀನರು ತುಳು ಲಿಪಿಯಲ್ಲಿ ಬಳಸಿದ್ದಾರೆ ಎನ್ನುವುದು ಕನ್ನಡದಲ್ಲಿ ಪ್ರಸ್ತುತ ಚಿಹ್ನೆಯನ್ನು ಬಳಸಲು ಕಾರಣ. ಡಾ. ಪದ್ಮನಾಭ ಕೇಕುಣ್ಣಾಯರು 'ಇದು ಸರಿಯೇ?' ಎಂಬ ಆಕ್ಷೇಪವೆತ್ತಿ, ಕನ್ನಡದ ಉ ಕಾರ ಲಿಪಿ ಸಂಕೇತದ ಮುಂದೆ '៑ ' ಈ ಚಿಹ್ನೆಯನ್ನು ನೀಡುವುದು ಹೆಚ್ಚು ಯುಕ್ತವಲ್ಲವೇ ಎಂದು ಪ್ರಶ್ನಿಸಿದಾಗ ನಾವು ಈಗಾಗಲೇ ಬಳಸುತ್ತ ಬಂದ ಲಿಪಿಸಂಕೇತವೊಂದರ ಜತೆ ಅಂಟಿಕೊಂಡ ಸಮಸ್ಯೆಗಳ ಬಗ್ಗೆ ಹೆಚ್ಚು ಆಲೋಚಿಸುವಂತಾಯಿತು.

ತುಳು ಲಿಪಿಯಲ್ಲಿ, ಸ್ವತಂತ್ರವಾಗಿ ಬರುವಾಗ ಅಕಾರದ ಮುಂದೆ ಅರ್ಧಾಕ್ಷರದ ಚಿಹ್ನೆಯನ್ನು ನೀಡಿ ಈ ವರ್ಣವನ್ನು ಸೂಚಿಸಲಾಗುತ್ತದೆ [ಅ್]. ಆದರೆ ವ್ಯಂಜನದ ಮುಂದೆ ಬರುವಾಗ ಅಕಾರ ರಹಿತವಾಗಿ, ಕೇವಲ ವ್ಯಂಜನ ವರ್ಣಕ್ಕೇ ಅರ್ಧಾಕ್ಷರದ ಚಿಹ್ನೆಯನ್ನು ಜೋಡಿಸಿ ಇದನ್ನು ಸೂಚಿಸುವುದು ಕ್ರಮ [ತಾನ್ –ತ್+ಆ+ನ್+ಅ್ = ತಾನ್]. ಕಾರಣ ತುಳುವಿನಲ್ಲಿ ಸ್ವರರಹಿತ ವ್ಯಂಜನವನ್ನು ಈ ಸ್ವರ ವರ್ಣದೊಂದಿಗೆ ಸೇರಿಸಿ ಉಚ್ಚರಿಸುವ ರೂಢಿ ಇದೆ. ಇದು ತುಳುವಿನ ಪದಾಂತದಲ್ಲಿ ಸಾಮಾನ್ಯವಾಗಿ ಬಳಕೆಯಾಗುವ ಒಂದು ಧ್ವನಿಮಾ.

ಈ ಉಚ್ಚಾರ ಪದದ ಆರಂಭದಲ್ಲಿ ಬರುವಾಗ ಮಾತ್ರವೇ ಅಲ್ಲಿ ಪ್ರತ್ಯೇಕ ಲಿಪಿಸಂಕೇತದ ಅಗತ್ಯ ತಲೆದೋರುತ್ತದೆ. ಉದಾಹರಣೆಗೆ ಅ್ಂದ, ಅ್ಂಬೆ –ಇತ್ಯಾದಿ. ಇಂತಹ ಪದಗಳ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟು ಮಾತ್ರ. ಇದು ಪದಮಧ್ಯದಲ್ಲಿ ಬರುವುದೇ ಇಲ್ಲ. ಪದಾಂತದಲ್ಲಿ ಹಲವು ಸಂದರ್ಭಗಳಲ್ಲಿ ಕಾಣಿಸಿಕೊಂಡು ತುಳುವಿನ ಅನನ್ಯತೆಯಾಗಿ ರೂಪುಗೋಳ್ಳುತ್ತದೆ.

ತುಳುವಿನಲ್ಲಿ ವ್ಯಂಜನಾಂತ ಪದಗಳಿಲ್ಲ, ಪದಗಳು, ಅವು ಸ್ವೀಕೃತವಾಗಿದ್ದರೂ ಕೂಡ ಕನ್ನಡದಂತೆಯೇ ಸ್ವರಾಂತವಾಗಿ ಬದಲಾಗುತ್ತವೆ. ಹಾಗೆ ಸ್ವರಾಂತವಾದ ಪದಗಳಲ್ಲಿ 'ಅ್' ಕಾರಾಂತವಾಗುವವುಗಳ ಸಂಖ್ಯೆ ಸಾಕಷ್ಟಿದೆ. ಜತೆಗೆ ಸ್ವೀಕೃತ ಪದಗಳೆಲ್ಲ 'ಅ್' ಕಾರಾಂತಗಳಾಗಿ ಮಾರ್ಪಡುವುದೇ ತುಳುವಿನ ರೂಢಿ. ಅಂದರೆ ಅಂತ್ಯದಲ್ಲಿ ಬರುವ ಸ್ವರ ಕನ್ನಡದಂತೆ ಉಕಾರವೋ ಅಕಾರವೋ ಆಗದೆ [ಕಾಲೇಜ್ > ಕಾಲೇಜು/ಕಾಲೇಜ ಮುಂತಾಗಿ] 'ಅ್' ಕಾರಾಂತವಾಗುವುದು. ಇಲ್ಲಿ ಗುರುತಿಸುವಿಕೆಯ ಅನುಕೂಲಕ್ಕಾಗಿ ಮಾತ್ರ ಅಕಾರದ ಮುಂದೆ '್' ಚಿಹ್ನೆಯನ್ನು ನೀಡಲಾಗಿದೆ. ಇದು ಪದಾಂತದಲ್ಲಿ ಅಕಾರ ಸಹಿತ ಉಚ್ಚಾರವಾಗುವ ಬದಲು ಹಿಂದಿನ ವ್ಯಂಜನದ ಮೇಲೆ ನೇರವಾಗಿ ಅಂಟಿಕೊಳ್ಳುತ್ತದೆ.

ಇದರ ಉಚ್ಚಾರದ ಸ್ಥಾನ ಉಕಾರದಂತೆ ಮಧ್ಯ ಉನ್ನತವೇ ಹೊರತು ಅಕಾರದಂತೆ ಪಶ್ಚ ನಿಮ್ನ ಅಲ್ಲ. ಆದರೆ ಉಕಾರದಂತೆ ಗೋಳವೂ ಅಲ್ಲ. ಅಕಾರದಂತೆ ವಿವೃತವೂ ಅಲ್ಲ. ಕನ್ನಡದಲ್ಲಿ ಪದದ ಆರಂಭದ ಮತ್ತು ಕೊನೆಯ ಅಕಾರಗಳು ವಿವೃತವಾಗಿರುತ್ತವೆ. ಪದಮಧ್ಯದಲ್ಲಿ ಮಾತ್ರ ಸಂವೃತ ಬರುವುದು ರೂಢಿ. ಸಾಮಾನ್ಯವಾಗಿ ಭಾಷಾವಿಜ್ಞಾನದಲ್ಲಿ ಈ ಉಚ್ಚಾರವನ್ನು ಉಕಾರದೊಂದಿಗೆ [U ವಿನ ಅಡಿಗೆ ಒಂದು ಚುಕ್ಕಿ ಹಾಕಿ] ಸೂಚಿಸುವುದು ರೂಢಿ.

ವಿಶಿಷ್ಟ ವರ್ಣವೊಂದಕ್ಕೆ ಲಿಪಿ ಸಂಕೇತವನ್ನು ಸೂಚಿಸುವಾಗ ಉಚ್ಚಾರದ ಸ್ಥಾನವನ್ನು ಮುಖ್ಯ ಆಧಾರವಾಗಿ ಪರಿಗಣಿಸುವುದು ಹೆಚ್ಚು ವೈಜ್ಞಾನಿಕವಾಗುತ್ತದೆ. ಆದ್ದರಿಂದ ಈಗಾಗಲೇ ಪ್ರಚಲಿತವಿರುವ 'ಅ್' ಲಿಪಿರೂಪವನ್ನು ಕೈಬಿಟ್ಟು 'ಉ್' ಎಂಬ ಲಿಪಿರೂಪವನ್ನು ಸಿದ್ಧಗೊಳಿಸುವುದೇ ಸರಿ. ಪ್ರಸ್ತುತ ಅರ್ಧಸ್ವರ ಉಕಾರದ ಭಾಗವೇ ಹೊರತು ಅಕಾರದ್ದಲ್ಲ ಎನ್ನುವುದನ್ನು ಇಲ್ಲಿ ಗಮನಿಸಬೇಕು. ಉದಾ; ಉ್ಂಬೆ [ಈತ] ಉ್ಂದ [ಇಕೋ]ಕಾಡ್ [ಕಾಡು] ಕಾಲೇಜ್ [ಕಾಲೇಜು] ಪೆನ್ನ್ [ಪೆನ್ನು]

ಪಳಂತುಳುವಿನ ಸ್ಟ್ ಎಂಬ ಧ್ವನಿಮಾ

'ಸ್ಟ್' ಎಂದು ಸಂಕೇತಿಸಲಾದ, ತುಳುವಿಗೇ ವಿಶಿಷ್ಟವಾದ ವರ್ತ್ಸ್ಯ ಧ್ವನಿಮಾ ಎಲ್ಲ ತುಳು

ಪ್ರಾಚೀನ ಕಾವ್ಯಗಳಲ್ಲೂ ವ್ಯಾಪಕವಾಗಿ ಬಳಕೆಯಾಗಿದೆ.

ವೆಂಕಟರಾಜ ಪುಣಿಂಚತ್ತಾಯರು ಭಾಗವತೊದ ಪ್ರಸ್ತಾವನೆಯಲ್ಲಿ 'ಈ ಧ್ವನಿಮಾವು ತಮಿಳು ಮಲಯಾಳಂಗಳಲ್ಲಿ ಈಗಲೂ ಪ್ರಚಲಿತವಿದೆ. ಅದೇ ದ್ರಾವಿಡ ವರ್ಗಕ್ಕೆ ಸೇರಿದ ತುಳುವಿನಲ್ಲೂ ಅದು ಇರುವುದು ಅಸಹಜವೇನಲ್ಲ. ಇದನ್ನು ಮಲಯಾಳಂನಲ್ಲಿ 'ററ' ಎಂಬ ಸಂಕೇತದಿಂದ ಗುರುತಿಸಲಾಗುತ್ತದೆ. ಇದು ಎರಡು ಶಕಟರೇಫಗಳ ಜೋಡಣೆಯೆಂದು ಆಕಾರದಿಂದಲೇ ತಿಳಿದುಬರುತ್ತದೆ.'[17] ಎಂದಿದ್ದಾರೆ.

ಮಲಯಾಳಂನ ಲಿಪಿಯಲ್ಲಿ 'ററ' ಎರಡು ಶಕಟರೇಫಗಳಂತೆ ಕಂಡರೂ ಉಚ್ಚಾರದಲ್ಲಿ ತಕಾರ ಅಥವಾ ಟಕಾರವನ್ನು ವರ್ತ್ಸ್ಯ *Alveotar* ಸ್ಥಾನದಿಂದ ಉಚ್ಚರಿಸಿದರೆ ಸಿಗುವ ಉಚ್ಚಾರವೇ ಇದೆ. ಇದು ಸಹಜ ದ್ವಿತ್ವಾಕ್ಷರವಾಗಿದ್ದು ಹಿಂದಿನ ಅಕ್ಷರಕ್ಕೆ ಎರಡು ಮಾತ್ರೆಗಳ ಮೌಲ್ಯವನ್ನು ಕೊಡುತ್ತದೆ.

ತುಳುವಿನ 'ಸ್ಟ' ಯಾವುದೇ ಸಂದರ್ಭದಲ್ಲಿ ಹಿಂದಿನ ಹ್ರಸ್ವಕ್ಕೆ ಎರಡು ಮಾತ್ರೆಗಳ ಮೌಲ್ಯವನ್ನು ಕೊಡುವುದಿಲ್ಲ. ಮಲಯಾಳಂನಲ್ಲಿ 'ററ' ನಿಂದ ಆರಂಭವಾಗುವ ಶಬ್ದಗಳಿಲ್ಲ. ಆದರೆ ತುಳುವಿನಲ್ಲಿ ಸ್ಟ ನಿಂದ ಆರಂಭವಾಗುವ ಧಾರಾಳ ಶಬ್ದಗಳಿವೆ. ಸಂಯುಕ್ತಾಕ್ಷರಗಳಿಂದ ಅಥವಾ ಸಜಾತೀಯ ವ್ಯಂಜನಗುಚ್ಛದಿಂದ ಶಬ್ದಗಳು ಆರಂಭವಾಗುವ ರೂಢಿ ದ್ರಾವಿಡ ಭಾಷೆಗಳಲ್ಲಿಲ್ಲ. ಆದ್ದರಿಂದ ಮಲಯಾಳಂನ 'ററ' ದ್ವಿತ್ವವಾಗಿದ್ದರೂ ತುಳುವಿನ 'ಸ್ಟ' ದ್ವಿತ್ವವಾಗಿರುವ ಸಂಭವವಿಲ್ಲ.

ಹಳೆಯ ತುಳುವಿನ ಶಬ್ದಾದಿಯ 'ಸ್ಟ' ಹೊಸ ತುಳುವಿನಲ್ಲಿ ಅ, ಉ್, ಇ –ಗಳಾಗಿ ಪರಿವರ್ತನೆ ಹೊಂದಿದೆ. ಉದಾಹರಣೆಗೆ– ಸ್ಟಬೆರ್ > ಉ್ಂಬೆರ್, ಸ್ಟೀಕುಳು > ಈಕುಳು, ಸ್ಟಾರ್ > ಆರ್

ಶಬ್ದ ಮಧ್ಯ ಹಾಗೂ ಶಬ್ದಾಂತ್ಯದ 'ಸ್ಟ' ಧ್ವನಿಮಾ ತ್ ಅಥವಾ ದ್ ಆಗಿ ಪರಿವರ್ತನೆ ಹೊಂದಿದೆ. ಉದಾಹರಣೆಗೆ– ಆಸ್ಟೆರ್ > ಆತೆರ್, ಬೂಳ್‌ಸ್ಟ > ಬೂರ್‌ತ್/ದ್, ಕಟ್ಟ್‌ಸ್ಟ > ಕಟ್ಟ್‌ತ್/ದ್

ಶಬ್ದ ಮಧ್ಯದಲ್ಲೂ ಕೆಲವೊಮ್ಮೆ 'ಇ' ಕಾರದ ಉಚ್ಚಾರ ಬರುವು ದುಂಟು. ಉದಾಹರಣೆಗೆ– ಆಸ್ಟೆಕ್ > ಅಯಿಕ್ಕ್, ಆಸ್ಟೆಟ್‌ತ್ತೆ > ಆಯಿಡ್‌ತ್ತೆ

ಸ್ಟ ವಿನ ಸ್ಥಾನದಲ್ಲಿ ಬಳಕೆಯಾಗುವ ತ್, ದ್ ಗಳಿಗೆ ಸ್ವಲ್ಪ ಮಟ್ಟಿನ ವರ್ತ್ಸ್ಯೋಚ್ಚಾರಣೆ ಇದೆ.[18]

ತುಳು ಗದ್ಯಕಾವ್ಯ 'ದೇವೀ ಮಹಾತ್ಮೆ' ಯಲ್ಲಿ 'ಸ್ಟ'ನ ಬದಲು 'ಸ್ದ' ಬಳಕೆಯಾಗಿದೆ. ಅಂದರೆ ದೇವಿಮಹಾತ್ಮೆ 'ಸ್ಟ' ಗೆ 'ದ' ವಿನ ಸ್ಥಾನದ ಉಚ್ಚಾರವಿತ್ತೆನ್ನುವುದಕ್ಕೆ ಸಾಕ್ಷಿಹೇಳುತ್ತದೆ. ಭಾಷಾ ಪ್ರಯೋಗದ ದೃಷ್ಟಿಯಿಂದ ಸಂಪಾದಕರು ದೇವೀ ಮಹಾತ್ಮೆ ಭಾಗವತೊಕ್ಕಿಂತ ಪ್ರಾಚೀನವೆಂದು ಹೇಳಿದ್ದರೂ 'ಸ್ದ' ವಿನ ಪ್ರಯೋಗ ದೇವಿಮಹಾತ್ಮೆಯೇ ಅರ್ವಾಚೀನವಿರಬೇಕೆಂಬ ಸಂಶಯು ಮೂಡಿಸುತ್ತದೆ. ಏಕೆಂದರೆ ಭಾಗವತೊದ 'ಸ್ಟ' ದೇವೀಮಹಾತ್ಮೆಯ ಕಾಲಕ್ಕೆ 'ಸ್ದ'

ಆಗಿ, ಬರಬರುತ್ತ 'ದ್/ತ್' ಆಗಿ ಪರಿವರ್ತನೆಗೊಂಡಿರಬಹುದು ಎನ್ನುವ ಊಹೆಗೆ ಅವಕಾಶವಿದೆ. 'ಸ್ದ' ನಿಂದ ಆರಂಭವಾಗುವ ಶಬ್ದ 'ಸ್ದ' ಲೋಪವಾಗಿಯೂ ಪ್ರಯೋಗವಾದ ಎರಡು ಉದಾಹರಣೆಗಳು ದೇವೀ ಮಹಾತ್ಮೆಯಲ್ಲೇ ಸಿಗುತ್ತವೆ.

ಉದಾಹರಣೆಗೆ- ಸ್ದಳ್ಳಂಚಿತ್ತಿ > ಉಳ್ಳಂಚಿತ್ತಿ, ಸ್ದಳೆತರ್ಪಿ > ಉಳೆತರ್ಪಿ

ಒಟ್ಟಿನಲ್ಲಿ, ಪ್ರಾಚೀನ ತುಳುವಿನ ಸ್ಟ/ಸ್ದ ಗಳು 'ಸ್' ದ ಸ್ಥಾನದಲ್ಲಿ ನಿಂತು 'ದ್' ಅಥವಾ 'ತ್' ವನ್ನು ಉಚ್ಚರಿಸಿದಾಗ ದೊರೆಯುವ ವರ್ತ್ಸ್ಯೋಚ್ಚಾರ ಹೊಂದಿದ್ದುವೆನ್ನುವುದು ನಿಸ್ಸಂಶಯ. ಆಧುನಿಕ ತುಳುವಿನಲ್ಲಿ ಶಬ್ದಾರಂಭದ 'ಸ್ಟ' ಲೋಪವಾಗಿದೆ. ಶಬ್ದಮಧ್ಯ ಮತ್ತು ಶಬ್ದಾಂತ್ಯದ 'ಸ್ಟ' ದ್ ಅಥವಾ ತ್ ಆಗಿ ಬದಲಾಗಿದೆ.

ಪ್ರಾಚೀನ ತುಳು ಕಾವ್ಯಗಳ ಹಸ್ತಪ್ರತಿಗಳಲ್ಲಿ ಇದನ್ನು ಸ್ಕಾರದಡಿಗೆ ಟಕಾರದ ಒತ್ತುನೀಡಿ ಬರೆಯಲಾಗಿದೆ. . ಅದಕ್ಕೆ ಪ್ರತ್ಯೇಕ ಲಿಪಿ ಸಂಕೇತವಿಲ್ಲ. ಇದು ತುಳುವಿಗಾಗಿಯೇ ಸಿದ್ಧವಾಗಿದ್ದ ಲಿಪಿಯಾಗಿದ್ದರೆ 'ಉ್' ಮತ್ತು 'ಸ್ಟ' ಗಳಿಗೆ ಪ್ರತ್ಯೇಕ ಲಿಪಿಸಂಕೇತ ಇರಬೇಕಿತ್ತು ಎನ್ನುವ ಸಂಶಯ ಕೊನೆಗೂ ಕಾಡುತ್ತದೆ.

ಅಕಾಡೆಮಿಯ ಮೂಲಕ ಸಂತುಲಿತಗೊಳಿಸಿ ಅಭಿವೃದ್ಧಿಪಡಿಸಿದ ತುಳು ಅಕ್ಷರ ಮಾಲೆಯ ಲಿಪಿಸಂಕೇತಗಳು



ಕಾಗುಣಿತಗಳು

ಕಾ ಕಿ ಕೀ ಕು ಕೂ ಕೃ ಕೆ ಕೈ



ಕೊ ಕೌ ಕಂ



ಒತ್ತಕ್ಷರಗಳು

ರ್ಕ ಣು ಣೂ ಸ್ಯ ಳು ನ್ತ ದ್ಧ ನ್ಕ



ಜ್ಯ ಲ್ಪ ಲ್ಲ ಕ್ಕ ಟು ಟೂ ಟ್ಟ ಡು



ಡು ನೇ ರ್ಧ ನ್ ಣ್ಣ ಸ್ಟ್ ಸ್ಥ ಸ್ತೃ



ಕ್ನ ತ್ರ ತು ಕ್ ಕ್ಟ ಚ್ಛ ಡ್ಢ

ತ್ಸ ಶ್ಚ ಸ್ಮ ಸ್ವ್ಯ



ಈ ಒ ಔ ಕು ಕೂ ಭ ಟ



ಸಂತೆ ಸಂತೆ

ಸಂಖ್ಯಾ ಲಿಪಿ

1 2 3 4 5



6 7 8 9 10 100



ಸಂಖ್ಯಾ ಲಿಪಿಗಳು

ಸಂ	ಸಂಸ್ಕೃತ	ಗ್ರಂಥ	ತಮಿಳು	ತೆಲುಗು	ಮಲಯಾಳ	ತುಳು	ಕನ್ನಡ
1	१	௧	௧	౧	൧	൧	೧
2	२	௨	௨	౨	൨	൨	೨
3	३	௩	௩	౩	൩	൩	೩
4	४	௪	௪	౪	൪	൪	೪
5	५	௫	௫	౫	൫	൫	೫
6	६	௬	௬	౬	൬	൬	೬
7	७	௭	௭	౭	൭	൭	೭
8	८	௮	௮	౮	൮	൮	೮
9	९	௯	௯	౯	൯	൯	೯
10	१०	௰	௰	౧౦	൰	൰	೧೦
100	१००	௱	௱	౧౦౦	൱	൱	೧೦೦

ಬರ್ನೆಲ್ ನೀಡಿದ ತುಳು ಮಲಯಾಳಂ ಲಿಪಿರೂಪಗಳ ಮಾದರಿ



ಬರ್ನೆಲ್ ನೀಡಿದ ಒತ್ತಕ್ಷರಗಳು ಮತ್ತು ಲಿಪಿಭೇದಗಳು
ಇವು ತಾಳೆಯೋಲೆ ಮತ್ತು ಶಾಸನಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ







ಇತರ ಲಿಪಿ ಭೇದಗಳು





ಪ್ರವೀಣ್ ರಾಜ್ ಎಸ್. ರಾವ್ ಮತ್ತು ಬಳಗದವರು ತಯಾರಿಸಿದ ತಂತ್ರಾಂಶ
'ತೌಳವ' ದಲ್ಲಿ ಬಳಕೆಯಾದ ಲಿಪಿರೂಪಗಳು.
ಪರಿಷ್ಕಾರ ಸಲಹೆ : ಡಾ. ರಾಧಾಕೃಷ್ಣ ಬೆಳ್ಳೂರು, ಡಾ. ಎಸ್.ಆರ್. ವಿಘ್ನರಾಜ್



ಕೆ.ಪಿ. ರಾವ್ ತಯಾರಿಸಿದ ತಂತ್ರಾಂಶದಲ್ಲಿ ಬಳಕೆಯಾದ ಲಿಪಿರೂಪಗಳು
ಪರಿಷ್ಕಾರ ಸಲಹೆ : ಡಾ. ರಾಧಾಕೃಷ್ಣ ಬೆಳ್ಳೂರು





ಅನಂತಪುರ ಶಾಸನ
Estempage
ಪ್ರಾಚ್ಯ ಸಂಚಯ ಸಂಶೋಧನ
ಕೇಂದ್ರ



ಗೋಸಾಡ ಶಾಸನ
Estempage
ಪ್ರಾಚ್ಯ ಸಂಚಯ ಸಂಶೋಧನ
ಕೇಂದ್ರ

ಕಿದೂರು ಶಾಸನ
Estempage
ಪ್ರಾಚ್ಯ ಸಂಚಯ ಸಂಶೋಧನ ಕೇಂದ್ರ

ಮಾಮೇಶ್ವರ ಶಾಸನ
Estempage
ರಾಧಾಕೃಷ್ಣ ಬೆಳ್ಳೂರು

ಕುಲಶೇಖರ ಶಾಸನ
Estempage
ರಾಧಾಕೃಷ್ಣ ಬೆಳ್ಳೂರು



ಬಜಕೂಡ್ಲು ಶಾಸನ
Estempage
ಎಸ್. ಎ. ಕೃಷ್ಣಯ್ಯ
ರಾಧಾಕೃಷ್ಣ ಬೆಳ್ಳೂರು

ಕೆಳಕುಳಿ ಶಾಸನ

ಛಾಯಾಪ್ರತಿ : ಎಸ್.ಎ. ಕೃಷ್ಣಯ್ಯ,
ಪ್ರಾಚ್ಯ ಸಂಚಯ ಸಂಶೋಧನ
ಕೇಂದ್ರ, ಉಡುಪಿ.



ಕೋಟ ಶಾಸನ

ಛಾಯಾಪ್ರತಿ : ಎಸ್.ಎ. ಕೃಷ್ಣಯ್ಯ,
ಪ್ರಾಚ್ಯ ಸಂಚಯ ಸಂಶೋಧನ
ಕೇಂದ್ರ, ಉಡುಪಿ.

ಕೊಳನಕೋಡು ಶಾಸನ

ಛಾಯಾಪ್ರತಿ : ಎಸ್.ಎ. ಕೃಷ್ಣಯ್ಯ,
ಪ್ರಾಚ್ಯ ಸಂಚಯ ಸಂಶೋಧನ
ಕೇಂದ್ರ, ಉಡುಪಿ.



ಕೋಟ ಶಾಸನ

ಛಾಯಾಪ್ರತಿ : ಎಸ್.ಎ. ಕೃಷ್ಣಯ್ಯ,
ಪ್ರಾಚ್ಯ ಸಂಚಯ ಸಂಶೋಧನ
ಕೇಂದ್ರ, ಉಡುಪಿ.

ಶಿರಿಯಾ ಶಾಸನ

ಪರಕ್ಕಿಲ ಶಾಸನ



1902ರಲ್ಲಿ ಮುಂಬಯಿ ಪ್ರೆಸ್‌ನಿಂದ ಲಿತೋಗ್ರಾಫ್‌ನಲ್ಲಿ ಮುದ್ರಣವಾದ ಸಪ್ತಶತೀ.
ಕೃಪೆ : ಪ್ರಾಚ್ಯ ಸಂಚಯ ಸಂಶೋಧನ ಕೇಂದ್ರ

Tulu-P-1A-side



Tulu-P-2A-side

ತಾಳೆಯೋಲೆಯಲ್ಲಿ ತುಳುಲಿಪಿ

ಅನುಬಂಧ 1

ತುಳು ಲಿಪಿ : ಕೆಲವು ಟಿಪ್ಪಣಿಗಳು

1. ಯಾವುದೇ ಭಾಷೆಗೆ ಅದರದ್ದೇ ಆದ ಲಿಪಿ ಇರಬೇಕೆಂದಿಲ್ಲ. ಯಾವುದೇ ಭಾಷೆ ಲಿಪಿಯೊಂದಿಗೆ ಇಟ್ಟುಕೊಂಡಿರುವ ಸಂಬಂಧ ಕೇವಲ 'ಧ್ವನಿಗೆ ತಕ್ಕ ಲಿಪಿ ಸಂಕೇತ' ಎನ್ನುವಷ್ಟಕ್ಕೇ ಸೀಮಿತವಾಗಿದೆ. ಇಂಗ್ಲೀಷ್, ಹಿಂದಿ ಮುಂತಾದ ಪ್ರಮುಖ ಭಾಷೆಗಳಿಗೇ ಸ್ವತಂತ್ರ ಲಿಪಿ ಇಲ್ಲ. ಕರಾವಳಿಯ ಲಕ್ಷಾಂತರ ಸಂಸ್ಕೃತ ಗ್ರಂಥಗಳು ತುಳು ಲಿಪಿಯಲ್ಲಿವೆಯೇ ಹೊರತು ದೇವನಾಗರಿಯಲ್ಲಲ್ಲ. ಅಂದರೆ ಈ ಲಿಪಿಸಂಪ್ರದಾಯ ಕೇವಲ ತುಳುವಿನದ್ದು ಮಾತ್ರವಲ್ಲ ಇದನ್ನು ತುಳುವಿಗಾಗಿ ಪುನಃ ಬಳಕೆಗೆ ತರುತ್ತೇವೆ ಎಂದು ಹಟಕಟ್ಟಿ ಹೊರಟ ಮಾತ್ರಕ್ಕೆ ತುಳು ಬೆಳೆಯಲಾರದು. ತುಳುವಿಗೆ ಲಿಪಿಯಿತ್ತು, ಅದಕ್ಕೆ ತಿಗಳಾರಿ ಎಂಬ ಹೆಸರೂ ಇತ್ತು. ಅದು ಈಗಿನ ಮಲೆಯಾಳ ಲಿಪಿಗಿಂತ ಮೊದಲೇ ತುಳುವಿಗೆ ಅಳವಡಿಸಲ್ಪಟ್ಟಿತ್ತು ಎಂಬ ಸತ್ಯ ಈಗ ಸಾಬೀತಾಗಿದೆ. ಅದನ್ನು ಆ ಮಟ್ಟದಲ್ಲಿ ಉಳಿಸಬೇಕೇ ಹೊರತು ತುಳುವಿಗೆ ತುಳು ಲಿಪಿಯನ್ನು ಮತ್ತೆ ಅಳವಡಿಸುವ ಪ್ರಯತ್ನದ ಆವಶ್ಯಕತೆ ಇಲ್ಲ.

2. ತುಳುವಿಗೆ ಕನ್ನಡ ಲಿಪಿ ಈಗಾಗಲೇ ಹೊಂದಿಕೊಂಡಿದೆ. ಸಾವಿರಾರು ತುಳು ಗ್ರಂಥಗಳು ಕನ್ನಡ ಲಿಪಿಯಲ್ಲೇ ಮುದ್ರಣಗೊಂಡಿವೆ. ತುಳುವರಿಗೆಲ್ಲ ಕನ್ನಡ ಗೊತ್ತಿದೆ. ಲಿಪಿ ಎನ್ನುವುದು ಒಂದು ಸಂಕೇತಗಳ ವ್ಯವಸ್ಥೆ ಮಾತ್ರ. ಈಗ ನಾವು ಇದ್ದ ಲಿಪಿ ಸಂಕೇತಗಳನ್ನೇ ಕಡಿಮೆ ಮಾಡುವ, ಸರಳಗೊಳಿಸುವ ತರಾತುರಿಯಲ್ಲಿದ್ದೇವೆ. ಇನ್ನು ತುಳುವಿಗೆ ಲಿಪಿಯನ್ನು ಅಳವಡಿಸುವುದೆಂದರೆ ನಾವು ಮತ್ತೆ ಹತ್ತೈವತ್ತು ವರ್ಷಗಳಷ್ಟು ಹಿಂದಕ್ಕೆ ಹೋಗಬೇಕಾಗುತ್ತದೆ. ಮಾತ್ರವಲ್ಲ ಸಾಹಿತ್ಯ ರಚನೆ, ಸಂಶೋಧನೆಗಳ ಮೂಲಕ ತುಳುವನ್ನು ಸಮರೋಪಾದಿಯಲ್ಲಿ ಸಮೃದ್ಧಗೊಳಿಸಿ ಇತರ ಭಾಷೆಗಳ ಮಟ್ಟಕ್ಕೆ ತಂದು ನಿಲ್ಲಿಸುವ ಅನಿವಾರ್ಯತೆಯ ಮಧ್ಯೆ ಲಿಪಿ ಕಲಿಯುವ ಸಂಕೀರ್ಣ ತೊಡಕನ್ನು ಕಾಲಿಗೆ ಗಂಟು ಹಾಕಿ ಪರದಾಡಬೇಕಾಗುತ್ತದೆ. ಅಪರಿಚಿತ ಲಿಪಿಯನ್ನು ಕಲಿತು, ರೂಢಿಸಿ, ಸಾರ್ವತ್ರಿಕವಾಗಿ ಬಳಕೆಗೆ ತರುವುದೆಂದರೆ ಅದು ಒಂದು ತಲೆಮಾರಿನಲ್ಲಿ ನಡೆದು ಹೋಗುವ ಕೆಲಸವಲ್ಲ. ಸದ್ಯ ಒಂದು ಜನಸಮೂಹದಲ್ಲಿ ಬಳಕೆಯಲ್ಲಿರುವ ಲಿಪಿಯಾಗಿದ್ದರೆ, ಆ ಜನ ಸಮೂಹಕ್ಕೆ ಉದ್ದೇಶಿತ ಭಾಷೆಯ ಪರಿಚಯವಿದ್ದರೆ ಸರಿ. ಒಂದು ಲಿಪಿಯನ್ನು ಒಂದಕ್ಕಿಂತ ಹೆಚ್ಚು ಭಾಷೆಗಳಿಗೆ ಬಳಸಬೇಕೆನ್ನುವ ಈ ತಂತ್ರಜ್ಞಾನ ಯುಗದ ಯುನಿಕೋಡ್ ವ್ಯವಸ್ಥೆಯಲ್ಲಿ ತುಳು ಲಿಪಿಯನ್ನು ಮತ್ತೆ ಬಳಕೆಗೆ ತರುವ ಹಟ ತುಳುವಿನ ಭಾಷಿಕ, ಸಾಹಿತ್ಯಕ ಬೆಳವಣಿಗೆಗೆ ತೊಡಕಾಗಿ ಪರಿಣಮಿಸಬಹುದು.

3. ಎಲ್ಲ ಲಿಪಿಗಳೂ ಹಲವಾರು ಅವಸ್ಥಾಂತರಗಳನ್ನು ದಾಟಿ ಈಗಿನ ಸ್ಥಿತಿಗೆ ಬಂದಿವೆ. 19ನೇ ಶತಮಾನದ ಉತ್ತರಾರ್ಧ ಹಾಗೂ 20ನೇ ಶತಮಾನಗಳಲ್ಲಿ ಲಿಪಿಯಲ್ಲಾದ ಪರಿಷ್ಕಾರಗಳು ಅಷ್ಟಿಷ್ಟಲ್ಲ. ಬರವಣಿಗೆಯ ರೂಪ ಕಲ್ಲಚ್ಚಿಗೆ ಬಂದಾಗ, ಮುದ್ರಣದ ಮೊಳೆಗಳಿಗೆ ಬಂದಾಗ, ಗಣಕೀಕರಣಗೊಳ್ಳುವಾಗ, ಬೇರೆ ಬೇರೆ ವಿನ್ಯಾಸದ ಲಿಪಿರೂಪಗಳನ್ನು ತಯಾರಿಸುವಾಗ ಸಾಕಷ್ಟು ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಆದರೆ ತುಳು ಲಿಪಿ ಕಲ್ಲಚ್ಚಿಗಾಗಲೀ ಮುದ್ರಣಕ್ಕಾಗಲೀ ಬರಲೇ ಇಲ್ಲ. ಹಾಗಾಗಿ ಅದು ಪರಿಷ್ಕಾರವಾಗಿ ಸಿದ್ಧಗೊಳ್ಳಬೇಕಾದ ಯಾವ ಘಟ್ಟವನ್ನೂ ಪ್ರವೇಶಿಸಲೇ ಇಲ್ಲ. ನಾವು ಈವತ್ತು ನಡೆಸುವ ಒಂದೊಂದು ಪರಿಷ್ಕಾರವೂ ಅದನ್ನು ಮಲಯಾಳದ ಹತ್ತಿರಕ್ಕೆ ಕೊಂಡೊಯ್ಯುತ್ತದೆ ಮತ್ತು ನಮ್ಮ ಪ್ರಯತ್ನದ ಅಂತಿಮ ಹಂತ ನಮಗೆ ಮಲಯಾಳ ಲಿಪಿಯೇ ಸಾಕು ಎಂಬಲ್ಲಿಗೆ ನಮ್ಮನ್ನು ತಲುಪಿಸಿಬಿಡುತ್ತದೆ. ತುಳುನಾಡಿನಲ್ಲಿ ಒಂದು ಲಿಪಿ ಇತ್ತು, ಅದು ತುಳುವಿನ ಬರವಣಿಗೆಗೂ ಬಳಕೆಯಾಗುತ್ತಿತ್ತು ಮತ್ತು ಅದೇ ಮೂಲದಿಂದ ಈವತ್ತಿನ ಮಲಯಾಳಂ ಲಿಪಿ ವಿಕಾಸವಾಗಿದೆ ಎಂಬುದು ತುಳುನಾಡಿಗೆ ಹೆಮ್ಮೆಯ ಸಂಗತಿ. ಲಿಪಿ ಇದೆ ಎಂಬ ಹೆಗ್ಗಳಿಕೆಯೊಂದಿಗೆ ಆಸಕ್ತರಿಗಾಗಿ ಸಾಫ್ಟ್‌ವೇರ್ ಕೂಡ ಇರಲಿ ಎನ್ನುವ ಯೋಚನೆಗೆ ಕಂಪ್ಯೂಟರ್ ಸಾಕ್ಷರತಾ ಸಮಿತಿ ಮೊದಲ ಬಾರಿಗೆ ರೂಪ ನೀಡಿದ್ದೊಂದು ಸಾಹಸದ, ಸವಾಲಿನ ಕೆಲಸ. ಈ ಕೆಲಸಕ್ಕಾಗಿ ಪ್ರಸ್ತುತ ಲಿಪಿಯನ್ನು ಒಮ್ಮೆಲೇ ಪರಿಷ್ಕರಿಸುವುದು ಮತ್ತು ಆಕಾರ ನೀಡಿ ಸೌಂದರ್ಯ ತುಂಬುವುದು ಅನಿವಾರ್ಯವಾಯಿತು. ಲಿಪಿಸಂಕೇತಗಳನ್ನು ಇನ್ನಷ್ಟು ಉರುಟುಗೊಳಿಸಿ ಅಳತೆಯನ್ನು ಸರಿಹೊಂದಿಸಲಾಯಿತು. ಕನ್ನಡ, ಮಲಯಾಳಗಳಲ್ಲಿ ಹಲವಾರು ವರ್ಷಗಳಿಂದ ನಡೆಯುತ್ತಲೇ ಇರುವ ಕೆಲಸವನ್ನು ಕೆಲವೇ ದಿನಗಳಲ್ಲಿ ಮಾಡಿಮುಗಿಸುವ ಅಡಚಣೆ ಎದುರಾಯಿತು. ಆದರೂ ಒಂದಷ್ಟು ಕೆಲಸಗಳು ವ್ಯವಸ್ಥಿತವಾಗಿ ನಡೆದು ಹೋದುವು. ಅಗತ್ಯವಿಲ್ಲದ ಸಂಕೇತಗಳನ್ನು ಕೈಬಿಡುವುದು, ಅಗತ್ಯವಿರುವ, ಆದರೆ ಚಾಲ್ತಿಯಲ್ಲಿಲ್ಲದ ಲಿಪಿರೂಪಗಳನ್ನು ಹೊಸದಾಗಿ ಸೃಷ್ಟಿಸುವುದು ಮುಂತಾಗಿ ಪರಿಷ್ಕಾರಗಳನ್ನು ದಿಢೀರನೆ ರೂಪಿಸಬೇಕಾಗಿ ಬಂತು. ಸ್ವರಗಳ ಒತ್ತಿನಲ್ಲಿ ಏಕರೂಪತೆಯನ್ನು ತರಲಾಯಿತು. ಎಕಾರ ಒಕಾರಗಳಿಗೆ ದೀರ್ಘ ರೂಪವನ್ನು ಸೃಷ್ಟಿಸಲಾಯಿತು. ಈ ಎಲ್ಲ ಕೆಲಸಗಳೂ ಕ್ರಮಬದ್ಧವಾಗಿ ನಡೆದು ಕೆ.ಪಿ. ರಾವ್ ಕೀ ಬೋರ್ಡಿಗೆ ಲಿಪಿಸಂಕೇತಗಳನ್ನು ಅಳವಡಿಸಲಾಯಿತು.[15] ಮುಂದೆ ಸ್ವತಃ ಕೆ.ಪಿ. ರಾವ್ 'ಪದ' ಸಾಫ್ಟ್‌ವೇರ್ ಮೂಲಕ, ತುಸು ಭಿನ್ನವಾಗಿ ಪರಿಷ್ಕರಿಸಿದ ಲಿಪಿರೂಪಗಳನ್ನು ತಯಾರಿಸಿ ಗಣಕೀಕರಣಗೊಳಿಸಿದರು.[16] ಇವೆಲ್ಲ ಪ್ರಯೋಗಗಳೇ ಹೊರತು ತುಳುವಿಗೆ ಅನಿವಾರ್ಯವಾದ ಅವಯವಗಳನ್ನು ಜೋಡಿಸುವ ಕೆಲಸಗಳಲ್ಲ. ಅಲ್ಲಿ ಇಲ್ಲಿ ನಡೆಯುವ ಲಿಪಿ ಕಲಿಸುವ ಕಾರ್ಯಾಗಾರಗಳೂ ಅಷ್ಟೆ, ಇದರಿಂದ ತುಳು ಭಾಷೆಗೆ ಯಾವ ಉಪಕಾರವೂ ಇಲ್ಲ. ಲಿಪಿ ಪರಿಷ್ಕರಣೆ ಎನ್ನುವುದು ತುಳುವಿನ ಮಟ್ಟಿಗೆ ಒಂದು ಕುತೂಹಲ ಮಾತ್ರ. ಲಿಪಿಯನ್ನು ಗಣಕೀಕರುಸುವ ಸಂದರ್ಭದಲ್ಲೂ ಒಂದಷ್ಟು ಮಂದಿ ಬೆಚ್ಚಿಬಿದ್ದದ್ದಿದೆ, ಕೈಬರಹ ಮಾದರಿಗಳೇ

ಗಣಕೀಕರಣಗೊಳ್ಳಬೇಕೆಂದು ಬಯಸಿದ್ದಿದೆ. ಇಂತಹ ಗೊಂದಲಗಳಿಗೆ ಕಾರಣಗಳೂ ಇಲ್ಲದಿಲ್ಲ. ಕನ್ನಡವೇ ಮುಂತಾದ ಭಾಷೆಗಳಲ್ಲಿ ನಿಧಾನಗತಿಯಲ್ಲಿ ನಡೆದ ಲಿಪಿ ಪರಿಷ್ಕಾರದ ಕೆಲಸ ತುಳುವಿನಲ್ಲಿ ಒಮ್ಮೆಲೇ ನಡೆದಾಗ ತಾಳೆಯೋಲೆಗಳಲ್ಲಿನ ಲಿಪಿರೂಪಗಳನ್ನು ಕಂಡವರು ಬೆಚ್ಚಿಬೀಳುವುದು ಸಹಜವೇ. ಲಿಪಿ ತನ್ನ ಮಾಧ್ಯಮಗಳಿಗೆ ಅನುಸಾರವಾಗಿ ಬದಲಾಗುವ ಚಲನಶೀಲ ಸಂಗತಿಯೇ ಹೊರತು ಯಾವಾಗಲೂ ಒಂದೇಹಾಗೆ ಉಳಿಯುವ ಜಡ ವಸ್ತುವಲ್ಲ. ಈವತ್ತಿನ ಕನ್ನಡ ಸಾಫ್ಟ್‌ವೇರ್ ಫಾಂಟ್‌ಗಳನ್ನು ಅಚ್ಚಿನ ಮೊಳೆ, ಕಲ್ಲಚ್ಚು, ತಾಳೆಯೋಲೆ ಹಸ್ತಪ್ರತಿ ಹಾಗೂ ಶಾಸಗಳೊಂದಿಗೆ ಹೋಲಿಸಿದರೆ ಬದಲಾವಣೆಯ ಸ್ವರೂಪ ಮನದಟ್ಟಾಗುತ್ತದೆ. ಇದೆಲ್ಲ ಸಹಜ ಪ್ರಕ್ರಿಯೆ ಅಷ್ಟೆ.

4. ಈ ಲಿಪಿ ಸಂಪ್ರದಾಯವನ್ನು ಅಕಾಡೆಮಿಕ್ ಆಗಿ ಅಧ್ಯಯನ ಮಾಡಬಲ್ಲ ಒಂದಷ್ಟು ಮಂದಿ ಕಲಿಯಲೇಬೇಕು. ಅದು ಓದಿಗಾಗಿಯೇ ಹೊರತು ಬರವಣಿಗೆಗಾಗಿ ಅಲ್ಲ. ಸಾವಿರಗಟ್ಟಲೆ ತಾಳೆಯೋಲೆ ಗ್ರಂಥಗಳು ಈ ಲಿಪಿಯಲ್ಲಿವೆ. ಅವುಗಳಲ್ಲಿ ಅತ್ಯಂತ ಅಪೂರ್ವವೂ ಅಮೂಲ್ಯವೂ ಆದ ಮಾಹಿತಿಗಳಿವೆ. ಅವನ್ನು ಓದಿ ಲಿಪ್ಯಂತರಗೊಳಿಸುವುದು ಇಂದಿನ ಅಗತ್ಯ. ಅದಕ್ಕಾಗಿ ಕಲಿಯಬೇಕಾದ್ದು ತಾಳೆಯೋಲೆಗಳಲ್ಲಿರುವ ಅಥವಾ ಶಾಸನಗಳಲ್ಲಿರುವ ಲಿಪಿರೂಪಗಳನ್ನೇ ಹೊರತು ಪರಿಷ್ಕಾರಗೊಂಡ ತುಳು ಫಾಂಟನ್ನಲ್ಲ.

ಅನುಬಂಧ 2
ತುಳು ಶಾಸನ ಪಾಠಗಳು

1. ಗೋಸಾಡ ಶಾಸನ

ಕಾಸರಗೋಡು ತಾಲೂಕು ಕುಂಬಡಾಜೆ ಗ್ರಾಮದ ಗೋಸಾಡ ಶ್ರೀ ಮಹಿಷಮರ್ದಿನೀ ದೇವಾಲಯದ ಹಿಂಬದಿಯಲ್ಲಿರುವ ಶಿಲಾಶಾಸನ. ಓದು : ಡಾ. ರಾಧಾಕೃಷ್ಣ ಬೆಳ್ಳೂರು, ಛಾಯಾಪ್ರತಿ ಪ್ರಾಚ್ಯ ಸಂಚಯ ಸಂಶೋಧನ ಕೇಂದ್ರ, ಉಡುಪಿ.

ಸ್ವಸ್ತಿ ಶ್ರೀ ಕುಂಬಚ್ಚ ಪ
ದ್ಧತಿನ್ತಂಗಟ್ ವೆಂನ್ದಿ
ಕಾರ್ಯೊ. ವೀರ ದೇವೆರನ್ದ ಕ
ವೆಸಿಂಹರ ಮಿತ್ತನಾಧಿಕಟ್
ಮದಟ್ * ನಾಡ್‌ನ್ತ * * *
ಕಟ್ಟ್‌ತ್ ಸೂಕ್ಷಿತಂದಟ್‌ಲ
ದೇವಿಕುಣ್ಡರದ ಮ*ಣ
ಖು * ರಭ * * ಪ್ಪುಕ್ * * * *
[ಕೊನೆಯ ಸಾಲು ಸಂಪೂರ್ಣ ನಷ್ಟವಾಗಿದೆ]

2. ಅನಂತಪುರ ಶಾಸನ

ಕಾಸರಗೋಡಿನ ಕುಂಬಳೆ ಸಮೀಪದ ಅನಂತಪು ದೇವಾಲಯದ ಹೊರ ಆವರಣದಲ್ಲಿರುವ ಗಣಪತಿ ಗುಡಿಯಬದಿಯಲ್ಲಿರುವ ಶಿಲಾಫಲಕ. ಮೊದಲ ಓದು ಡಾ. ಕೆ.ವಿ. ರಮೇಶ್ ಮರು ಓದು : ಡಾ. ರಾಧಾಕೃಷ್ಣ ಬೆಳ್ಳೂರು, ಛಾಯಾಪ್ರತಿ ಪ್ರಾಚ್ಯ ಸಂಚಯ ಸಂಶೋಧನ ಕೇಂದ್ರ, ಉಡುಪಿ.

ಸ್ವಸ್ತಿ ಶ್ರೀ ಮೀನನ್ಸ್ ಬೃಹಸ್ಪತಿ
ಪ್ಪಿ ತಲೆ ತಿಂಗಳ್ ವೆಂದಿ ಕಾರ್ಯ
ವೈಕಿಂದೇವೆಯಾಸ್ತ್ರಿ[ಯಿ]ಕು ಜಯಸಿಂಹ
ದೇವೆಖು ಮುಗರ್ಶ್ಯರ ಗ್ರಾಮಕ್
ತಡ್ಯ ಪರಿಹಾರೊ ಮಾಂತನ್‌ಲ
ಕಾತೆಖು. ಮುಗೆರ್ಶ್ಯರ ಗ್ರಾಮೊ ಕಾತ್
ಸೂಕೊಣ್ಣೈಖು. ಆ[ಅ]ಣ್ಣೇ[ಬೆ,ಜೆ]ವ್‌ಲಾಸ್ನ[ಸ್ತ್] ಒರಿಯೆಅನ್ದನ್ನ
ಅರಸ್ ಕರ್ತಾವ್ ಒಪ್ಪ ಸಂಕೇತ. ಆ

ಗ್ರಾಮಣ್ಪ್ ಪತ್ತಿನ ಗ್ರಾಮಂಕೆಂಚಲಾತ್
ತಗೆಪಸ್ತಿನಾಯೆ ಏರ್‌ಡ ಆಸ್‌ತಿನಾ
ಯೆಗ್ರಾಮಂಕ್ ಪಿದೆಯಿ. ಗ್ರಾ
ಮನ್ತ [ಸೂ]ರ್ಯ **ಸ[ಸ್,ಸ್ಪ]ಹ[ಮ]ಡ್‌ತ್ತ್ ಕಾಪು

3. ಕಿದೂರು ಶಾಸನದ ಪಾಠ

ಕಾಸರಗೋಡಿನ ಕುಂಬಳೆ ಸಮೀಪದ ಕಿದೂರು ದೇವಾಲಯದ ಹಿಂಬದಿಯ ಗದ್ದೆಯ ಬದುವಿನಲ್ಲಿರುವ ಶಿಲಾ ಫಲಕ. ಓದು : ಡಾ. ರಾಧಾಕೃಷ್ಣ ಬೆಳ್ಳೂರು, ಛಾಯಾಪ್ರತಿ ಪ್ರಾಚ್ಯ ಸಂಚಯ ಸಂಶೋಧನ ಕೇಂದ್ರ, ಉಡುಪಿ.

ಸ್ವಸ್ತಿಶ್ರೀ ಮ
ದನದೇವೆಯರಟ್ಟ
ಕಬೆಸಿಂಗೆರು
ಒಮ್ಬೃನ್ನೂತ್ತಿರಡ್ಡೆಡ್
ಸ್‌ಜ್‌ತ್ತಿನ ಸಜ್ಕೇತ
ಕಿದೆಯೂರ ದೇವೆರೆಕ್
ಪಸ್ಸನ್ತಳೆ ಯಿಜ್ಜತ್
ಕೇಂಡಿಕ್‌ವಟ ಬೆಟ್ಟ್‌ತ್
ತಹರಿಪ್‌ಟ ಎಳಖುತ್
ಕೊಣ್ಯರ ಪಟ್ಟದ್ದೈವೆ
ರೆಕರ ಅರಸ್‌ಕರ ಐ
ಪತ್ತೊನ್ಜೆನೆ ಪ
ನುಕಾಪುಯೆಂಕಾ ಕೂಡ
ನ್ತಿನಾರಯಟ ಮಕ್‌ಪಿ
ಸಸಪ್ಥಪರಿನ[ಣ]ಹಂ

4. ಕುಲಶೇಖರ ಶಾಸನ

*ಮಂಗಳೂರು ಕುಲಶೇಖರ ಶ್ರೀ ವೀರನಾರಾಯಣ ದೇವಸ್ಥಾನದ ಗರ್ಭಗುಡಿಯ ಬಲಬದಿಯಲ್ಲಿರುವ ಶಿಲಾ ಫಲಕ. ತುಳು ಲಿಪಿ ತುಳು ಭಾಷೆಯಲ್ಲಿರುವ ದಾನ ಶಾಸನ. ಕಾಲ ಗೊತ್ತಾಗುವುದಿಲ್ಲ. ಆದರೆ ಶಾಸನವನ್ನು ಹಾಕಿಸಿದ ತಿಂಗಳು ಮೇಷಮಾಸ. ಧರ್ಮಸೇನ ***** ಬಲವನ್ನ್ಯರಸನ ಉಲ್ಲೇಖವಿದೆ. 'ದೇವಾಲಯೊ ವೆಸ್ದ್' ಎಂಬ ವಾಕ್ಯ ಇರುವುದರಿಂದ ಉಲ್ಲೇಖಿತ ಅರಸ ದೇವಾಲಯವನ್ನು ಕಟ್ಟಿಸಿದ ಎನ್ನುವುದು ಸ್ಪಷ್ಟ. ಆತ ವರ್ಷಕ್ಕೆ ದೇವರ*

ನೈವೇದ್ಯಕ್ಕಾಗಿ ಹನ್ನೆರಡು ಮುಡಿ ಬತ್ತವನ್ನೂ ಸ್ವರ್ಣವನ್ನೂ ದಾನ ನೀಡಿದಿದ್ದು ಸ್ಪಷ್ಟವಾಗಿ ಉಲ್ಲೇಖಿತವಾಗಿದೆ.
ಓದು ಮತ್ತು ಛಾಯಾಪ್ರತಿ : ಡಾ. ರಾಧಾಕೃಷ್ಣ ಬೆಳ್ಳೂರು.

ಧನುಪ್ಪರ(?)ಳ ಮೇಷಮಾಸೊನ್ಟ್ ಆ
ಲಯೊವೆನ್ದ್ ಧರ್ಮಸೇನ *****
ಜಯವನ್ದ್ಯರಸೆರು ಪತ್ತಿಜ *****
ಎನ್ತಪ್ಪನುರವನ್ಟ್ ಮುಡ್ ಬಾರ್ನ್ದ್ ವರಿ
ಸೊಕ್ ಪದಿರಾಡ್ ಪದಿರಾಡ್ ಆತಿಞ್ಚ ***
ನ್ತಾ ದೇವಾನ್ತುಳ್ಳ ಪಾದಮೂಲಕೊಪ್ಪಾತ್ ***
ಗ್ ಸ್ವರ್ಣೊಮುಂ ಕಾತ್ ರೆಕ್ಷಿಪ್ಪುಣ ***
ನ್ತಳೆ ದೇವೆರ್ ********

5. ಮಾಮೇಶ್ವರ ಶಾಸನ
ವಿಟ್ಲ ಮಂಗಲ ಪದವಿನ ಸಮೀಪವಿರುವ ಮಾಮೇಶ್ವರದ ಉಮಾಮಹೇಶ್ವರರ ದೇವಾಲಯದ ಹಿಂಬದಿಯ ಪಾಳಿಯಲ್ಲಿರುವ ಶಿಲಾಶಾಸನ. ಓದು ಮತ್ತು ಛಾಯಾಪ್ರತಿ: ಡಾ. ರಾಧಾಕೃಷ್ಣ ಬೆಳ್ಳೂರು.
ಓದು ಮತ್ತು ಛಾಯಾಪ್ರತಿ : ಡಾ. ರಾಧಾಕೃಷ್ಣ ಬೆಳ್ಳೂರು.

ಸ್ವಸ್ತಿ ಶ್ರೀ ಕುಂಭಚ್ಚಾಗಮಿತ
ನನ್ತಿ ಭೂಮಿಜ್ಜನ್ತ ದೇವೆಯುಂದೊ
ಪ್ಪ ದಿನನ್ತ ವೆಷಮನ್ತ
ನ್ವರಣ್ಟ್ ವೈಕಿಂದೇವೆಯು ಆಲಯ
ದೇವರಾ ತಿಣೆ ಬೆನ್ನಡೆ
ಯಾವಳಿರ್ವೆಯು ಸಭೆಯಾ ಪಾ
ದಮೂಲಂಕ್ ಸಂದ್ ಬಡಚದಿನಪಹರಿ
ತ್ ಕಾವ ಉಮಾಮಹೇಶ್ವರಣ್ಟ್
ಸರ್ವ ಪರಿಹಾರೊ ವೆಂದ್
ಕದನ್ದಲುಳೆತ್ತ್ಣ್ಣಾದ್ಯಂ ಬೆಂ
ಬ್ಟ ಆಪತ್ತ್ ವ್ಣ್ಣಾಡ್ನಟ
ತ್ತಹರಿಪಟ ಪತ್ತಾರ ಬನ್ಧಿ
ತ್ ಕಳೆವಟಾ ವರುವಶೊಣ್ಟ್

ಬಂಕಿಂದೇವನ ಉಲ್ಲೇಖವಿದೆ. ವೈಕಿಂದೇವ ಎಂದರೆ ಅಳುಪ ಅರಸನಾದ ಬಂಕಿದೇವನೇ ಇರಬೇಕು. ಈತ ಉಮಾಮಹೇಶ್ವರ ದೇವಾಲಯವನ್ನೂ 'ದೇವರ ಜಗಲಿ'ಯನ್ನೂ ನಿರ್ಮಿಸಿ, ಬಡಚನನ್ನು ನಿಗ್ರಹಿಸಿ ದೇವಾಲಯಕ್ಕೆ ದತ್ತಿ ಕೊಟ್ಟದ್ದನ್ನು ಈ ಶಾಸನ ಉಲ್ಲೇಖಿಸುತ್ತದೆ. 'ಕುಂಭಚ್ಚಾಗಮಿತ' ಎನ್ನುವುದು ಏನೆಂದು ಸ್ಪಷ್ಟವಿಲ್ಲದಿದ್ದರೂ, ಇದೇ ಉಲ್ಲೇಖ ಕಾಸಗೋಡಿನ ಗೋಸಾಡ ಶಾಸನದದಲ್ಲೂ ಕಂಡುಬಂದಿದೆ. ಅಲ್ಲಿ 'ಕುಂಬಚ್ಚ ಪದ್ಧತಿ' ಎಂದು ಹೇಳಲಾದ ಪ್ರಯೋಗ ಹಿಂದೆ ಈ ಪ್ರದೇಶವನ್ನು ಆಳುತ್ತಿದ್ದ ಕುಂಬಚ್ಚ ಎಂಬ ಅರಸನ ಕಟ್ಟಳೆಯನ್ನು ಸೂಚಿಸುತ್ತಿರಬೇಕು. ವೈಕಿಂದೇವ ಎನ್ನುವುದು ಬಂಕಿದೇವ ಎನ್ನುವುದರ ತುಳು ರೂಪ ಇರಬಹುದು. ಕುಂಬಳೆಯ ಅನಂತಪುರ ಶಾಸನದಲ್ಲೂ ವೈಕಿಂದೇವನ ಪ್ರಸ್ತಾಪ ಇದೆ. ಅನಂತಪುರ ಶಾಸನವೂ ಮಾಮೇಶ್ವರ ಶಾಸನವೂ ಉಲ್ಲೇಖಿಸುವುದು ಒಬ್ಬನೇ ವೈಕಿಂದೇವನನ್ನು. ಅಳುಪ ಅರಸರಲ್ಲಿ ಇಬ್ಬರು 'ಬಂಕಿದೇವ' ಎಂಬ ಹೆಸರಿನ ಅರಸರಿದ್ದರು. ಮೊದಲನೆಯ ಬಂಕಿದೇವ ಪಾಂಡ್ಯರಿಂದ ತುಳುನಾಡಿನ ಆಡಳಿತವನ್ನು ಪುನಃ ಕಿತ್ತುಕೊಂಡವನು. ಈತನ ಕಾಲ ಹನ್ನೊಂದನೆಯ ಶತಮಾನದ ಮೊದಲ ಭಾಗ. ಎರಡನೆಯ ಬಂಕಿದೇವ ಹದಿನಾಲ್ಕನೆಯ ಶತಮಾನದ ಮೊದಲ ಭಾಗದಲ್ಲಿ ಆಳಿದವನು. ಪ್ರಸ್ತುತ ಶಾಸನ ಯಾರ ಕಾಲದ್ದೆನ್ನುವುದು ಸ್ಪಷ್ಟವಿಲ್ಲ.

ವಿಷಮವಾದ ಯುದ್ಧದಲ್ಲಿ ಸಂದ ಗೆಲುವಿಗಾಗಿ ಉಮಾಮಹೇಶ್ವರನಿಗೆ ಆಲಯವನ್ನೂ ದೇವರ ತಿಣೆಯನ್ನೂ ಕಟ್ಟಿಸಿದ್ದು ಶಾಸನದ ವಿಷಯ. ಬಡಚನನ್ನು ನಿಗ್ರಹಿಸಿದ ಇನ್ನೊಂದು ವಿಷಯವೂ ಶಾಸನದಲ್ಲಿ ಉಲ್ಲೇಖಿತವಾಗಿದೆ. ಇವೆರಡನ್ನೂ ಜತೆಗಿಟ್ಟು ನೋಡುವಾಗ, ಬಡಚನೊಂದಿಗೆ ಯುದ್ಧ ನಡೆದಿರಬೇಕೆನ್ನುವುದು ಸ್ಪಷ್ಟವಾಗುತ್ತದೆ. ಬಡಚ ಅಥವಾ ಬಡಜ ಈ ಪ್ರದೇಶದಲ್ಲಿದ್ದ ಒಬ್ಬ ದಲಿತ ಅರಸ.

6. ಕೊಳನಕೋಡು ಶಾಸನ

ಕುಂದಾಪುರ ತಾಲೂಕು ಕಂದಾವರದ ಕೊಳನಕೋಡಿನಲ್ಲಿ ದೊರೆತ ತುಳು ಲಿಪಿ ಕನ್ನಡ ಭಾಷೆಯ ಶಿಲಾಶಾಸನ. ಓದು : ಡಾ. ರಾಧಾಕೃಷ್ಣ ಬೆಳ್ಳೂರು, ಛಾಯಾಪ್ರತಿ : ಪ್ರಾಚ್ಯ ಸಂಚಯ ಸಂಶೋಧನ ಕೇಂದ್ರ, ಉಡುಪಿ.

ಸ್ವಸ್ತಿ ಶ್ರೀಃ
ಕೊಣಲ
ಕೋಡಿನ
ದೇವರ ಕೊಂ
ಗಂ ಬೆಳ್ಳಿಯ
ದೇವಸ್ವದ
ಸಮ್ಯ [ರ್ವ] ವನು
ಕಾದ ಮೂವತ್ತು

ಹೊನ್ನಂನ್ಕೊಂಡ
ಬರ್ಮ್ಮದೇವನ್

7. ಉಬ್ರಂಗಳ ತಾಮ್ರ ಶಾಸನ
ಓದು : ಡಾ. ರಾಧಾಕೃಷ್ಣ ಬೆಳ್ಳೂರು

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ
ಶಕನ್ಪ್ ಪದಿಮೂಜಿ ನೂತ ಪತ್ ಸನ್ಧಿ ವಿಭವ ಸಂವ
ತ್ಸರನ್ತ ಮೇಷ ಯಿಣ್‌ಮೊ ತಿಗೆಯಿ ಗುರುದಿನೊ
ನ್‌ಟ್ ಪುರುಷೋತಮ ನೂಚಿಲತಾಯ ತನ್ತ್ರಿ ಕಿದೆಯೂ
ರಯ ನಾರಯಣ ಪುತ್ರ ಕೇಶವಕ್ ಲೇಖಿ
ಪೊಲ್ ಕೊಳಿ ಸಂಧನೆ ಸನ್ತತಿ ಕುನ್ದಜ
ರೆ ಜಾತಿ ಕಾರಣೊ ನಡಪಾವರ ಶೇ
ಷ್ ಬೆನ್ಯರ ತನ್ತ್ರ[ನ್ದ] ವಿಭಾಡಿತ್ ಪೆರ್ಯಕಿ
ತ್ ಪೊದಿತಿ ಗರ್ಭೊಟ್ ಪುತ್ರತ್ಮಣ್ಣಯಟ
ಆ ಕಿನ್ನಿ ನಮ ಶಾಖಸೂತ್ರಗೊತ್ರೊಂ
ಜಾಸ್ ಪತ್ ಕಾಲೊ ಇತನ್ದೊಗು ನಡ
ತಿ ಕಾರಣಕುಧಿಕಿತ್ ಊರುಸೂರಾದ್ಯ ಐ
ಕಾರಣ(ಮು)ಳಟ್ಟ ಈ ಸ್ಥಾನೊಜನನ್ತ
ಒಙ್ಜೊ ಯರಡ್ ಚೆಂಬಿಓಲೆಟ್[19] ಒ
ರ್‍ಯರಣ್ಯಟ ತಿಂದಾಪಿ ಕುದಿಕಿತ್ ಸಮ್ಮ
ನ್ಧತಿತ್ ಕೊಳೆತ್‌ಳ ಇತನ್ದ ಮನ್ತಣಿಡ್
ಪವನೆಬೆನ್ದ್ ಬರಾಲುಪೆರ್ಯಪಾ
ಲ್‌ತ್ ಕಲೊಕ್ ಇನ್ನೂದ್ ಪಣವುಕೊಳ್
ಣ್ಟ ಶಾಲಪುತ್ರಕ್ವಿದ್ಯೆ ಬುದ್ಧಿಪದೇಶಿ
ತ್ ಷೋಡಶಾಕೊಂ ಪರ್ಯಪಾತ್ ಬೊ
ಡುನಾಪು ಬುಡ[–]ಕೊಳಿಕಿ ಪಣವು
ನಿಲಿಪಿಜಾಲು ಕದಿಕಿತ್‌ನಾನೆಟುನಿಲ್ಪ
ಲು ಈಸ್ಥಾನೊಸ್ಕ್ ಕೂಡ್‌ಳ ಭೂತಸ್ಥಲೊನು ಪತ[ಮ?]
ಜಿ ಬರೆಯಿ ಪ್ರಕರೊ ಸರ್ವಸಮ್ಮತೊಟ್ ಸೂ
ಡಕೊಳೆನ್ ಮಗ್‌ಳ ಕೆಣ್ಯರಯೆನ ವಂ
ಶೊಂಕ್ ಸಂಮಂಧೊದ್ದಿ. ಮೆಲ್ ಸನ್ತತಿ ಕುನ್ದ್‌ತ್ ಅ
ನ್ಯೊನ್ಯೊಭೆರೆರ್ ಎನ್ಯರೆ ಗ್ರಹೀಪ
ಕೊಳಿ ಚೆಂಬ್ಯೊಲೆಕ್ ಸೂರ್ಯಚನ್ದ್ರೆ

(ಹಿಂಭಾಗ)

ಸಾಕ್ಷಿ ಸತ್ಯಂ. ವಟ್ ಬರೆಯಿ ಸ್ಥಾನ
ವಿವರೊ ಉರುಡುರಾದಿ ಆಕವೆನಾಡ್
ಟ್‌ಧೆ ತೆನ್ಕೆಯಿ ಸೊಟ್ಟ್ ಸೂಡನಾ
ಡ್‌ಟಧಕನ ಕರ್ಕೆನಾಡ್‌ಟ್ ಧೂಬೊಳಟ್‌ರ್ಗ
ನಾಡ್‌ಟ್ ಧೂಕೊಳವಿನಾಡ್‌ಟ್ ಉಪತೂರುಟ್‌ಲ
ಚತ್ರಟ್ ಆ ಶೀಮೆಟ್ ಕೊನ್ನೆಬಿನ್ನ
ಣಿಮೂಲ್ಯೆರಶೀಮೆಟ್ ಕಾರಕಳ್‌ಟಇಧಳ
ಟ್ ಸ್ಥಾನೊ [ಇ]ನ್ದೆಕ್ ಬೆರಿಕೊಲ್ ಭೂತ
ಸ್ಥಲೊ ಇ[ನ್ದು]ಶೇಷೊ ಐಕ್ಳ ಬೆರಿಕೊ
ಲ್ ಭೂತಸ್ಥಲೊನ್ತ ವಿವರೊ ಸ್ಥಾನವಿವರೊಸೂ
ಎ ಬರೆಲ್ ಕೊಳಿ ಗ್ರನ್ಥೊಥ್ತ್ ಶೂ ನಡತೊ
ಣ್‌ಕ್‌ಣಾ
ಶ್ರೀಮಹಾಗಣೇಶ

ಅನುಬಂಧ 3

ತಿಗಳಾರಿ ಲಿಪಿ ಚರ್ಚೆ

2017ರಲ್ಲಿ ಡಾ. ಕೆಳದಿ ಗುಂಡಾ ಜೋಯಿಸರು ಮತ್ತು ಡಾ. ಕೆಳದಿ ವೆಂಕಟೇಶ ಜೋಯಿಸರು ಸಂಪಾದಿಸಿ, ಕೆಳದಿ ರಿಸರ್ಚ್ ಫೌಂಡೇಷನ್ ಪ್ರಕಟಿಸಿದ 'ಅಳಿವಿನಂಚಿನಲ್ಲಿ ತಿಗಳಾರಿ ಲಿಪಿ ಹಸ್ತಪ್ರತಿಗಳು' ಎಂಬ ಕೃತಿಯಲ್ಲಿ ತಿಗಳಾರಿ ಮತ್ತು ತುಳು ಲಿಪಿಗಳನ್ನು ಅತಿ ಕಡಿಮೆ ವ್ಯತ್ಯಾಸವಿರುವ ಭಿನ್ನ ಲಿಪಿಗಳಾಗಿ ಪರಿಭಾವಿಸಲಾಗಿದೆ ಮತ್ತು ಈ ಲಿಪಿ ಸಂಪ್ರದಾಯವನ್ನು ಶಿವಪ್ಪ ನಾಯಕನ ಕಾಲದಲ್ಲಿ ಹವ್ಯಕರು ಚಾಲ್ತಿಗೆ ತಂದರೆಂದು ಊಹಿಸಲಾಗಿದೆ. '16ನೇ ಶತಮಾನದ ಉತ್ತರಾರ್ಧ, 17ನೇ ಶತಮಾನದ ಸಮಯದಲ್ಲಿ ಕೆಳದಿ ಶಿವಪ್ಪನಾಯಕನ ಕಾಲದಲ್ಲಿ ಇಕ್ಕೇರಿ ಸುತ್ತುಮುತ್ತಲ ಊರುಗಳಿಂದ ದಕ್ಷಿಣ ಕನ್ನಡಕ್ಕೆ ಇಲ್ಲಿನವರು ವಲಸೆ ಹೋಗಿದ್ದರಿಂದ ಈ ಲಿಪಿ ಅಲ್ಲಿ ಪ್ರಚಲಿತಕ್ಕೆ ಬಂದಿರಬೇಕೆನಿಸುತ್ತದೆ. ಈ ಲಿಪಿಯ ಮೂಲಕ ಅಲ್ಲಿಯ ಭಾಷೆಯ ಸಾಹಿತ್ಯ ಕೃತಿಗಳೂ ರಚಿತವಾಗಿರಬಹುದು. ಮಲೆನಾಡಿನ ಹವ್ಯಕರ ಮೂಲ ಲಿಪಿಯೇ ತಿಗಳಾರಿಯಾಗಿದ್ದು ಮನೆಯ, ದೇವಾಲಯಗಳ ಲೆಖ್ಖಪತ್ರ, ಜಾತಕ, ವಸ್ತುಗಳ ಪಟ್ಟಿ, ನಿರೂಪಗಳ ಪ್ರತಿ ಮೊದಲಾದ ದೈನಂದಿನ ಬರವಣಿಗೆ ಈ ಲಿಪಿಯಲ್ಲಿ ಬರೆಯಲ್ಪಟ್ಟಿವೆ' [ಪುಟ XXVII] ಆದರೆ ಈ ಲಿಪಿ ಸಂಪ್ರದಾಯ ಸುಮಾರು ಹತ್ತನೇ ಶತಮಾನದ ಹೊತ್ತಿಗಾಗಲೇ ತುಳುನಾಡಿನಲ್ಲಿ ಚಾಲ್ತಿಯಲ್ಲಿತ್ತು ಎನ್ನುವುದು ನಿಸ್ಸಂಶಯ. ಇತ್ತೀಚೆಗೆ ದೊರೆತ, ಹೆಚ್ಚು

ಕಡಿಮೆ 10, 11, 12, ನೇ ಶತಮಾನದ್ದೆಂದು ಊಹಿಸಬಲ್ಲ ತುಳು ಶಾಸನಗಳೇ ಇದಕ್ಕೆ ಸಾಕ್ಷಿ ಹೇಳುತ್ತವೆ. ಜತೆಗೆ, ತುಳು ಪ್ರಾಚೀನ ಕಾವ್ಯಗಳಾದ ಕರ್ಣಪರ್ವ, ಸಂಭವಪರ್ವ ಅಥವಾ ಶ್ರೀ ಮಹಾಭಾರತೊ ಮತ್ತು ಶ್ರೀ ಭಾಗವತಾರ್ಥೊ ಅಥವಾ ಭಾಗವತೊದ ಕಾಲ 15ನೇ ಶತಮಾನಕ್ಕಿಂತ ಹಿಂದೆ ಹೋಗುತ್ತದೆ. ಶಾಸನಗಳಲ್ಲೂ ಕಾವ್ಯಗಳಲ್ಲೂ ಬಳಕೆಯಾದ ತುಳು ಭಾಷೆ ಮತ್ತು ಇಂದಿನ ತುಳು ಭಾಷೆಗಳ ನಡುವಿನ ವ್ಯತ್ಯಾಸವನ್ನು ಗಮನಿಸಿದರೆ, ಅಲ್ಲಿ ಕಾಣುವ ಭಿನ್ನತೆಯ ಪ್ರಮಾಣ 12ನೇ ಶತಮಾನದ ಕನ್ನಡ ಸಾಹಿತ್ಯದ ಭಾಷೆ ಮತ್ತು ಇಂದಿನ ಕನ್ನಡ ಭಾಷೆಗಳ ನಡುವಿನ ಅಂತರಕ್ಕಿಂತ ದೊಡ್ಡ ಪ್ರಮಾಣದಲ್ಲಿದೆ. ತುಳು ಶಾಸನಗಳಲ್ಲಿ ಬರುವ ಬಂಕಿದೇವ, ಕವಿಸಿಂಹ, ಕುಲಶೇಖರ ಇತ್ಯಾದಿ ಪ್ರಸ್ತಾವಗಳೂ ಪ್ರಸ್ತುತ ಊಹೆಯನ್ನು ಬಲಪಡಿಸುತ್ತವೆ. ಎನಿದ್ದರೂ ಶಿವಪ್ಪನಾಯಕನ ಕಾಲದಲ್ಲಿ ಈ ಲಿಪಿ ತುಳುನಾಡಿಗೆ ಬಂತು ಎನ್ನುವುದು ಸ್ವೀಕಾರ ಯೋಗ್ಯವಾದ ಹೇಳಿಕೆಯಲ್ಲ. ಜತೆಗೆ 'ಮಲೆನಾಡಿನ ಹವ್ಯಕರ ಮೂಲ ಲಿಪಿಯೇ ತಿಗಳಾರಿ' ಎಂಬ ಹೇಳಿಕೆಯೂ ಸರಿಯಾದದ್ದಲ್ಲ. ದಕ್ಷಿಣ ಕನ್ನಡ, ಕಾಸರಗೋಡುಗಳಲ್ಲಿ ಇಲ್ಲಿನ ಹವ್ಯಕರೂ ಶಿವಳ್ಳಿ ಬ್ರಾಹ್ಮಣರೂ ಈ ಲಿಪಿಯನ್ನು ಧಾರಾಳವಾಗಿ ಬಳಸಿದ್ದಾರೆ. ಹವ್ಯಕರ ಮನೆಗಳಿಗಿಂತ ಹೆಚ್ಚು ಶಿವಳ್ಳಿ ಮನೆಗಳಲ್ಲಿ ಈ ಲಿಪಿಯ ವೈದಿಕ ಸಾಹಿತ್ಯದ ತಾಳೆಯೋಲೆಗಳು ಸಿಗುತ್ತವೆ. ತಾಳೆಯೋಲೆ ಗ್ರಂಥಗಳ ನಿಬಿಡತೆಯೂ ತುಳುನಾಡಿನಲ್ಲೇ ದಟ್ಟವಾಗಿದೆ ಮತ್ತು ಈ ಭಾಗದಲ್ಲಿ ತಿಗಳಾರಿ ಎಂಬ ಪದವೇ ಬಳಕೆಯಲ್ಲಿಲ್ಲ. ಹಾಗಾಗಿ ತುಳು ಭಾಷಿಗರು ಈ ಲಿಪಿಯ ಮೇಲೆ ತಮ್ಮ ಪ್ರಭಾವ ಬೀರಿ ಸಾಮ್ಯಗೊಳಿಸಲು ಪ್ರಯತ್ನಿಸುತ್ತಿರುವುದು ಇಂದಿನ ದಿನಗಳಲ್ಲಿ ಕಂಡುಬರುತ್ತದೆ' [ಪುಟ XXVI] ಎಂಬ ಹೇಳಿಕೆ ತಪ್ಪಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ತಿಗಳಾರಿಯ ವರ್ಣಮಾಲೆಯನ್ನು ಕೊಡುತ್ತ 26ನೇ ಪುಟದಿಂದ 40ನೇ ಪುಟದ ತನಕ ಸಂಪಾದಕರು ಒದಗಿಸಿದ ತಿಗಳಾರಿ ಲಿಪಿ ಸಂಕೇತಗಳು ಕೆ.ಪಿ. ರಾವ್ ಅವರ ನೇತೃತ್ವದಲ್ಲಿ ಪ್ರಸ್ತುತ ಲಿಪಿಯನ್ನು ಪರಿಷ್ಕಾರಗೊಳಿಸಿ ಗಣಕೀಕರಣಗೊಳಿಸಿದ ಫಾಂಟ್‌ಗಳೇ ಹೊರತು ಸಾರ್ವಜನಿಕವಾಗಿ ಬಳಕೆಯಲ್ಲಿದ್ದ ತಿಗಳಾರಿ ಲಿಪಿರೂಪಗಳಲ್ಲ. [ಗಣಕೀಕೃತ ಲಿಪಿರೂಪಗಳನ್ನು ಈ ಕೃತಿಯಲ್ಲಿ ಪ್ರಕಟಿಸಲಾಗಿದೆ.]

ಟಿಪ್ಪಣಿಗಳು

1. ಡಾ. ಎಂ. ಚಿದಾನಂದ ಮೂರ್ತಿ : ಭಾಷಾವಿಜ್ಞಾನದ ಮೂಲ ತತ್ವಗಳು ಪು.159
2. ಇಂದೆಕ್ ಕವಿ ಕೊರ್ನ ಪುದರ್ ಸಂಭವಪರ್ವೊ
3. ಇಂದೆಕ್ ಕವಿ ಕೊರಿ ಪುದರ್ ಶ್ರೀ ಭಾಗವತಾರ್ಥೊ
4. ಉಂದು ಭಾಗವತೊದ 9 ನೇ ಸ್ಕಂಧೊ ಪನ್ಪಿನೈಟ್ ಸಂಶಯ ಇಜ್ಜಿ. ಅಂಚಾದ್ ಬೃಹತ್ ಗಾತ್ರೊದ ಸಮಗ್ರ ಭಾಗವತೊ 'ಶ್ರೀ ಭಾಗವತಾರ್ಥೊ' ಪನ್ಪಿ ಪುದರ್‌ಡ್ ತುಳುಡ್ ರಚನೆ ಆತ್‌ಂಡ್ ಪನ್ಪಿನವು ನಿಶ್ಚಯೊನೇ.
5. ಉಂದು ಅನಂತ ವ್ರತಕಥೆ ಪನ್ಪಿ ಪುಸ್ತಕೊಡು ಅಚ್ಚಾತ್‌ಂಡ್ : ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ 2010
6. ತುಳು ಛಂದಸ್ಸು, ರಾಧಾಕೃಷ್ಣ ಬೆಳ್ಳೂರು, ಅನುಬಂಧ 2
7. ಮಹಾಜನಪದ, ಸಂ. ಡಾ. ಪಾದೇಕಲ್ಲು ವಿಷ್ಣು ಭಟ್ಟ, 2014 ಪು.447 ಮಲಯಾಳ ಸಾಹಿತ್ಯ ಚರಿತ್ರೆ, ಕಯ್ಯಾರೆರೆ ಅನುವಾದೊ ಪು.11
8. Eliments of South Indian Paleography : A C Burnel pu.38
9. ಮಲಯಾಳ ಸಾಹಿತ್ಯ ಚರಿತ್ರೆ ಪು.8
10. 'The Vattelluttu was gradually supplanted by the modern Tamil after the consquest of Madras by the Cholas in ninth century, and it appears to have entirely gone out of use in the Tamil countryby the fifteenth century. in malabar it remained in general use up to the end of the seventeenth century among the Hindus, and since than in the form of the Kooleluttu, it is the character in which the Hindu sovereigns have thair grants grown up. The Mapilla of the neighbourhood of Telicherry and in the islands used this character till quit recently; it is now being supressed by the modified Arabic character which was religious prestige on its side.' - *A C BBurnell, P.39*
11. 'ನಾಗರ ಕನ್ನಡ ತಿಗುಳಆರ್ಯವನೋದಿಸುವ ಬಾಲಶಿಕ್ಷೆಯ ಉಪಾದ್ಯರ ಜೀವಿತಕ್ಕೆ' [ಎಪಿಗ್ರಾಫಿಯ ಕರ್ನಾಟಿಕ–5] ಕೃಪೆ : ಎಸ್. ಕಾರ್ತಿಕ್
12. ಶ್ರೀನಿವಾಸ ಹಾವನೂರ, ಹೊಸಗನ್ನಡದ ಅರುಣೋದಯ : ಪು.40
13. ಬೆನೆಟ್ ಜಿ ಅಮ್ಮನ್ನ, ತುಳು ಸಾಹಿತ್ಯ ಚರಿತ್ರೆ : ಪು.767
14. ಶ್ರೀನಿವಾಸ ಹಾವನೂರ, ಹೊಸಗನ್ನಡದ ಅರುಣೋದಯ : ಪು.42
15. ಚಿತ್ರ ನೀಡಲಾಗಿದೆ
16. ಚಿತ್ರ ನೀಡಲಾಗಿದೆ
17. ಪು. 19
18. ವಿವರಗಳಿಗಾಗಿ A comparative Study of Tulu Dialects ಗ್ರಂಥದ ಉದಾಹರಣೆಗಳನ್ನು ನೋಡಬಹುದು. ಪು. 11
19. ಚೆಂಬಿಓಲೆ < ಚೆಂಬ್ ಓಲೆ < ಚೆಂಬಿನ ಓಲೆ = ತಾಮ್ರ ಶಾಸನ

ತುಳು ಭಾಷೆಗ್ ಸ್ವಂತ ಲಿಪಿ ಇತ್ತ್‌ದ್ ಉಂದೆನ್ ಕಲ್ಪುನೆಡ್ದ್ ಹಿರಿಯಾಕುಲು ಪಿರಾಕ್‌ಡ್ದಿಂಚಿ ದಾಖಲೆ ಮಲ್ತ್ ದೀತಿನ ತಾಳೆ ಓಲೆಲೆನ್ ಗುರ್ತ ಮಲ್ತೊಂದು ಬೊಳ್ಪುಗು ಕನಯೆರೆ ಸಾಧ್ಯ ಆಪುಂಡು. ರಾಬರ್ಟ್ ಕಾಲ್ಡ್‌ವೆಲ್, ಎ.ಸಿ. ಬರ್ನೆಲ್, ಎಸ್.ಆರ್. ರಂಗನಾಥ ಪೂಂಜ, ಎಲ್.ಎ. ರವಿ ಶರ್ಮ, ಜಿ. ಪದ್ಮನಾಭ ಪಿಳ್ಳೆ, ಉಣ್ಣಿಕೃಷ್ಣನ್ ನಾಯರ್ ಇಂಚಿತ್ತಿ ವಿದ್ವಾಂಸೆರ್ನಕುಲು ತುಳು ಲಿಪಿತ್ತ ಬಗೆಟ್ ಸಂಶೋಧನೆ ಮಲ್ತ್ದ್ ಐತ ಮೂಲದ ಚರಿತ್ರೆದ ಬಗೆಟ್ ಮುದ್ರಣ ಸಾಹಿತ್ಯೊಡು ದಾಖಲೆ ಮಲ್ತೆರ್.

ಇತ್ತಿತ್ತೆ ತುಳು ಲಿಪಿ ಕಲ್ಪೊಡು, ಓದೊಡು ಪನ್ಪಿ ಅಂಗಲಾಪು ತುಳುವೆರೆಟ್ ಪುಟುತುಂಡು. ಕೆಲವು ಬೂಕುಲು ಪ್ರಕಟಲಾ ಆತ್ಂಡ್. ವೆಂಕಟರಾಜ ಪುಣಿಂಚತ್ತಾಯೆರ್ ಬರೆಯಿ ತುಳು ಲಿಪಿ ಅಕ್ಷರ ಮಾಲ್ಳೆ, ಪ್ರವೀಣ್ ರಾಜ್ ಎಸ್. ರಾವ್ ಮೇರೆನ ತೌಳವದ ಅಕ್ಷರೊಲು, ಜಿ.ವಿ.ಎಸ್. ರೆನ ತುಳು ಅಕ್ಷರ ಮಾಲೆ, ಜಯಕರ ದೇವಪ್ಪ ಪೂಜಾರಿಲೆನ ತುಳು ಲಿಪಿ ಬರೆಲೆ-ಬರವುಗು ನಿರೆಲ್, ತಮ್ಮಯರೆನ, ನಿಷ್ಕಲ್ ರಾವ್ ಮೇರೆನ ಬೂಕುಲು ಪ್ರಕಟ ಆತ್ಂಡ್. ಅಲ್ಪಲ್ಪ ತುಳು ಲಿಪಿ ಕಲ್ಪಾವುನ ಶಿಕ್ಷಕೆರ್ ಉಂಡಾಯೆರ್. ತುಳು ಲಿಪಿಟ್ ಆಮಂತ್ರಣ ಪತ್ರ, ಬೋರ್ಡ್‌ಲೆನ್ ಬರೆಯರಲಾ ಸುರು ಮಲ್ತೆರ್. ವೆಂಕಟರಾಜೆರೆನ ತುಳು ಲಿಪಿ ಪನ್ಪಿ ಬೂಕುನ್ ಅಕಾಡೆಮಿ ರಡ್ಡ್ ಸರ್ತಿ ಪ್ರಕಟ ಮಲ್ತ್ಂಡ್.

ತುಳುನಾಡ್‌ದ ಸಾರ ಸಾರ ತಾಳೆ ಓಲೆಲೆಡ್ ಒಂಜೇ ರೂಪೊದ ತುಳು ಲಿಪಿ ಉಂಡು ಪಣ್ಯೆರೆ ಆಪುಜಿ. ಅಂಚಾದ್ 2008ಡ್ ಡಾ. ರಾಧಾಕೃಷ್ಣ ಬೆಳ್ಳೂರು, ಡಾ. ಎಸ್.ಆರ್. ವಿಘ್ನರಾಜ್, ಡಾ. ಪಾದೇಕಲ್ಲು ವಿಷ್ಣು ಭಟ್, ಎಸ್.ಎ. ಕೃಷ್ಣಯ್ಯ ಇಂಚಿತ್ತಿ ಮಸ್ತ್ ವಿದ್ವಾಂಸೆರ್ನಕುಲು ಸೇರ್ದ್, ಶ್ರೀ ಕ್ಷೇತ್ರ ಧರ್ಮಸ್ಥಳ, ಉಡುಪಿ ಮಠ ಬಕ್ಕ ತುಳು ಲಿಪಿ ತಾಳೆ ಓಲೆಲು ಇತ್ತಿ ಸಂಸ್ಥೆಲು ಸೇರೊಂದು ಅಕಾಡೆಮಿದ ಗುರ್ಕಾರ್ಮೆಡ್ ಏಕರೂಪೀ ಲಿಪಿ ರೂಪೊಲೆನ್ ತಯಾರ್ ಮಲ್ಪೆರೆ ನಿರ್ಧಾರ ಮಲ್ತೆರ್. ಐನಾಜಿ ತಿಂಗೊಲು ಕೆಲಸ ಮಲ್ತ್ ಅಂತಿಮ ಅಧಿಕೃತ ರೂಪೊಲೆನ್ ತಯಾರ್ ಮಲ್ತೆರ್. ಆ ರೂಪೊಲೆನ್ ಅಕಾಡೆಮಿ ಮಾನಿತ್ಂಡ್. ರಾಧಾಕೃಷ್ಣ ಬೆಳ್ಳೂರು ತಯಾರ್ ಮಲ್ತಿನ ಪುಸ್ತಕ ಪ್ರಕಟ ಆಂಡ್. ಉಂದೆನ ಆಧಾರೊಡು ಇತ್ತೆ ಶಿಕ್ಷಕೆರ್ ಲಿಪಿ ಕಲ್ಪಾವೆರ್, ಪ್ರವೀಣ್ ರಾಜ್, ಕೆ.ಪಿ. ರಾವ್ ಇಂಚಿತ್ತಿನಕುಲು ತುಳುಗು ಸಾಫ್ಟ್‌ವೇರ್ ತಯಾರ್ ಮಲ್ತೆರ್.

ಎ. ಸಿ. ಭಂಡಾರಿ
ಅಧ್ಯಕ್ಷರು
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ